06 May 2026 Wednesday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 164 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಭಾವನಾಂತರಂಗ**

ಒಬ್ಬರಿಂದ ಸಹಾಯ ತೆಗೆದುಕೊಳ್ಳುವುದು
ಅನಿವಾರ್ಯತೆಯಾಗ
ಬೇಕೇ ಹೊರತು ಅಭ್ಯಾಸವಾಗಬಾರದು!

-ಸ್ನೇಹಾ ಆನಂದ್



ಬೆಂಗಳೂರು–ಮೈಸೂರು ರೈಲು ಮಾರ್ಗ: ನಾಲ್ಕು ಪಥದ ಮಾರ್ಗಕ್ಕೆ ಕ್ರಮ — ಪುಟ ಸಂ. 2



ಆಶಾಗಳ ಬಾಕಿ ವೇತನ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ — ಪುಟ ಸಂ. 3



ಪ್ರಕಾಶ್ ಬೆಲ್ಲದ್‌ಗೆ ಶ್ರೀಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ — ಪುಟ ಸಂ. 4

## ಸಾರಿಗೆ ಬಸ್‌ಗೆ ಬೆಂಕಿ: 17 ಪ್ರಯಾಣಿಕರು ಪಾರು

**ಹಾವೇರಿ:** ರಾಜ್ಯ ಸಾರಿಗೆ ಸಂಸ್ಥೆಯ 'ಪಲ್ಲಕ್ಕಿ' ಬಸ್‌ಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಧಗಧಗನೆ ಹೊತ್ತಿ ಉರಿದ ಘಟನೆ ಮಂಗಳವಾರ ನಡೆದಿದೆ. 17 ಪ್ರಯಾಣಿಕರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ.

ರಾಣೆಬೆನ್ನೂರು ತಾಲ್ಲೂಕಿನ ದೇವರೂಡ ಗ್ರಾಮದ ಬಳಿಯ ರಾಜ್ಯ ಹೆದ್ದಾರಿಯಲ್ಲಿ ಈ ಘಟನೆ ಸಂಭವಿಸಿದೆ. ಬಸ್ ಬೆಂಗಳೂರಿನಿಂದ ಗದಗಕ್ಕೆ ತೆರಳುತ್ತಿತ್ತು. ಬಸ್‌ನಲ್ಲಿ ಸುಮಾರು 17 ಹೆಚ್ಚು ಪ್ರಯಾಣಿಕರು ಪ್ರಯಾಣಿಸುತ್ತಿದ್ದರು. ಬ್ರೇಕ್ ಲೈನ್ ದೋಷದಿಂದ ಬೆಂಕಿ ಅವಘಡ ಸಂಭವಿಸಿದೆ ಎನ್ನಲಾಗಿದೆ.

ಕೂಡಲೇ ಎಚ್ಚೆತ್ತುಕೊಂಡ ಚಾಲಕ ಪಕ್ಕೀರಪ್ಪ ಬಸ್ ಅನ್ನು ನಿಲ್ಲಿಸಿದ್ದಾರೆ. ಅವರ ಸಮಯ ಪ್ರಜ್ಞೆಯಿಂದ ಎಲ್ಲಾ 17 ಪ್ರಯಾಣಿಕರ ಜೀವ ಉಳಿದಿದೆ.



## ತಮಿಳುನಾಡಿನಲ್ಲಿ ಅಚ್ಚರಿ ಕೇರಳದಲ್ಲಿ ನಿರೀಕ್ಷಿತ: ಸಿಎಂ

**ಬೆಂಗಳೂರು:** ತಮಿಳುನಾಡಿನ ಮತದಾರರು ಬದಲಾವಣೆ ಬಯಸಿದ್ದರು. ಅದರಂತೆ ಬದಲಾವಣೆಗೆ ಮತ ಹಾಕಿದ್ದಾರೆ. ಫಲಿತಾಂಶ ಆಶ್ಚರ್ಯಕರವಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಸುದ್ದಿಗೋಷ್ಠಿಯಲ್ಲಿ ಮಾತಾಡಿದ ಅವರು, ತಮಿಳುನಾಡಿನಲ್ಲಿ ಫಲಿತಾಂಶ ಆಶ್ಚರ್ಯಕರವಾಗಿದೆ. ಯುವಕರು ವಿಜಯ್‌ಗೆ ಮತ ಹಾಕಿದ್ದಾರೆ. ಚುನಾವಣೆಗಳಲ್ಲಿ ಹೀಗೂ ಆಗುತ್ತದೆ ಎಂದರು.

ಪಶ್ಚಿಮ ಬಂಗಾಳದಲ್ಲಿ 15 ವರ್ಷ ಮಮತಾ ಬ್ಯಾನರ್ಜಿ ಇದ್ದರು. ಆಡಳಿತ ವಿರೋಧಿ ಅಲೆ ಇರಬಹುದು. ನಾನು ಅಲ್ಲಿಗೆ ಹೋಗಿಲ್ಲ. ಎಸ್‌ಐಆರ್ ಮಾಡಿ 91 ಲಕ್ಷ ಮತ ರದ್ದು ಮಾಡಿದ್ದರು. ಇವೆಲ್ಲ ಕಾರಣ ಇರಬಹುದು. ಕೇರಳ ಫಲಿತಾಂಶ ನಿರೀಕ್ಷೆ ಇತ್ತು. ನಿರೀಕ್ಷೆಗಿಂತ ಜಾಸ್ತಿ ಬಂದಿದೆ. ಕೇರಳ ಸಿಎಂ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದು ಹೇಳಿದರು.

ಕರ್ನಾಟಕದಲ್ಲಿ ಎಸ್‌ಐಆರ್ ಮಾಡಲು ಅವಕಾಶ ಕೊಡ್ತೀರಾ ಎಂಬ ಪ್ರಶ್ನೆಗೆ ಕರ್ನಾಟಕದಲ್ಲಿ ನಿಷ್ಪಕ್ಷಪಾತವಾಗಿ ಎಸ್‌ಐಆರ್ ಮಾಡಬೇಕು. ಟಾರ್ಗೆಟ್ ಮಾಡಿದರೆ ಅದಕ್ಕೆ ಅವಕಾಶ ಕೊಡಲ್ಲ ಎಂದರು.



ಉಪಚುನಾವಣೆ ಎರಡು ಕ್ಷೇತ್ರದಲ್ಲಿ ನಾವು ಗೆದ್ದಿದ್ದೇವೆ. ಬಿಜೆಪಿ ಅವರು ಉಪಚುನಾವಣೆ ಮುಂದಿನ ಚುನಾವಣೆ ದಿಕ್ಸೂಚಿ ಅಂತ ಪ್ರಚಾರ ಮಾಡಿದರು. ಈಗ ನಾವು ಗೆದ್ದಿದ್ದೇವೆ. ಬಿಜೆಪಿ ಪ್ರಕಾರ 2028ಕ್ಕೂ ನಾವೇ ಬರ್ತೀವಿ ಅಂತ ಆಯ್ತಲ್ಲ. ಕಳೆದ ಬಾರಿ 3 ಬೈ ಎಲೆಕ್ಷನ್‌ನಲ್ಲಿ ಗೆದ್ದಿದ್ದೇವೆ. ಈಗ ಮತ್ತೆ 2ರಲ್ಲಿ ಗೆದ್ದಿದ್ದೇವೆ. ನಮ್ಮ ಕಾರ್ಯಕ್ರಮ ಜನ ಮೆಚ್ಚಿದ್ದಾರೆ. ನಮ್ಮ ಕಾರ್ಯಕ್ರಮಗಳು ಜನರಿಗೆ ತಲುಪಿವೆ. ಜನರು ನಮ್ಮ ಮೇಲೆ ವಿಶ್ವಾಸ ಇಟ್ಟಿದ್ದಾರೆ ಎಂದು ಹೇಳಿದರು.

ದಾವಣಗೆರೆಯಲ್ಲಿ ಮುಸ್ಲಿಂಮರ 56 ಸಾವಿರದಲ್ಲಿ 35 ಸಾವಿರ ಮತ ನಮಗೆ ಬಂದಿದೆ. ಪುಟ 2ಕ್ಕೆ

## ಹರಿಹರ ಪಂಚಮಸಾಲಿ ಪೀಠದಲ್ಲಿ ನಿಷೇಧಾಜ್ಞೆ ಜಾರಿ

**ದಾವಣಗೆರೆ:** ಹರಿಹರ ಪಂಚಮಸಾಲಿ ಪೀಠದಲ್ಲಿ ದಿನ ಕಳೆದಂತೆ ಸ್ವಾಮೀಜಿ ಬೆಂಬಲಿಗರು ಹಾಗೂ ಟ್ರಸ್ಟಿಗಳ ನಡುವಿನ ಗಲಾಟೆ ಜೋರಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮಠದಲ್ಲಿ ಸಭೆ, ಸಮಾರಂಭ ಮಾಡದಂತೆ ಜಿಲ್ಲಾಡಳಿತ ನಿಷೇಧಾಜ್ಞೆ ಜಾರಿ ಮಾಡಿದೆ.

ಮಠದಲ್ಲಿ ಎರಡು ಕಡೆ ಬೆಂಬಲಿಗರಿಂದ ಸಭೆ, ಸಮಾರಂಭ, ಸುದ್ದಿಗೋಷ್ಠಿಗಳು ನಡೆಯುತ್ತಿವೆ. ಇವುಗಳು ವಿಕೋಪಕ್ಕೆ ತಿರುಗಿದ್ದು, ಪ್ರತಿನಿತ್ಯ ಗಲಾಟೆ ನಡೆಯುತ್ತಿದೆ. ಇದರಿಂದಾಗಿ ಸಾರ್ವಜನಿಕ ಆಸ್ತಿಪಾಸ್ತಿ ನಷ್ಟ, ಕಾನೂನು ಸುವ್ಯವಸ್ಥೆ ಹಾಳಾಗುತ್ತಿದೆ. ಪೊಲೀಸ್ ಇಲಾಖೆ ಪದೇ ಪದೇ ಭದ್ರತೆ ನೀಡಲು ಆಗುವುದಿಲ್ಲ. ಅದ್ದರಿಂದ ಪಂಚಮಸಾಲಿ ಪೀಠದಲ್ಲಿ ಯಾವುದೇ ಸಭೆ, ಸಮಾರಂಭ, ಪತ್ರಿಕಾಗೋಷ್ಠಿ ನಡೆಸುವಂತಿಲ್ಲ. ಈ ಬಗ್ಗೆ ಸ್ವಾಮೀಜಿಗೆ, ಟ್ರಸ್ಟಿಗಳಿಗೆ ಹಾಗೂ ಅವರ ಬೆಂಬಲಿಗರಿಗೆ ಜಿಲ್ಲಾಡಳಿತದಿಂದ ಹಾಗೂ ಪೊಲೀಸ್ ಇಲಾಖೆಯಿಂದ ನೋಟಿಸ್ ಜಾರಿಗೊಳಿಸಿ ಮೇ 30ರವರಗೆ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಟ್ರಸ್ಟಿಗಳ ವಿರುದ್ಧ ಸ್ವಾಮೀಜಿ ಬೆಂಬಲಿಗರು ಮಂಗಳವಾರ ಲೆಕ್ಕಕೊಡಿ ಪುಟ 2ಕ್ಕೆ

# ಓಟ್ ಚೋರಿ ಅಲ್ಲ; ಡಕಾಯಿತಿ

## ಶೃಂಗೇರಿ ಅಂಚೆ ಮತ ಮರು ಎಣಿಕೆಯಲ್ಲಿ ಅಕ್ರಮ: ಸಿದ್ದರಾಮಯ್ಯ ವಾಗ್ದಾಳಿ

**ಬೆಂಗಳೂರು:** ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ. ರಾಜೇಗೌಡ ಅವರಿಗೆ ಬಂದಿದ್ದ ಮತಗಳನ್ನು ಅಕ್ರಮವಾಗಿ ಅಮಾನ್ಯ ಮಾಡಲಾಗಿದೆ. ಇದು ಓಟ್ ಚೋರಿ ಅಲ್ಲ. ಬಿಜೆಪಿಯ ಓಟ್ ಡಕಾಯಿತಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಇಡೀ ದೇಶದಲ್ಲೇ ಇಂತಹ ಕ್ರಿಮಿನಲ್ ಚಟುವಟಿಕೆ ಎಲ್ಲೂ ನಡೆದಿಲ್ಲ. ಅಂಚೆ ಮತಗಳನ್ನು ಅಮಾನ್ಯ ಮಾಡುವಂತೆ ಜಿಲ್ಲಾಧಿಕಾರಿ, ಚುನಾವಣಾಧಿಕಾರಿ ಮೇಲೆ ಕೇಂದ್ರದಿಂದ ಒತ್ತಡ ಇರಬಹುದು. ಯಾರೇ ಅಧಿಕಾರಿಗಳು ಇರಲಿ, ತಪ್ಪು ಮಾಡಿದ್ದರೆ ಶಿಕ್ಷೆ ಆಗಬೇಕು. ಈ ಬಗ್ಗೆ ತನಿಖೆ ನಡೆದು ಸತ್ಯ ಹೊರಬರಬೇಕು ಎಂದು ಆಗ್ರಹಿಸಿದರು.

ರಾಜೇಗೌಡಗೆ ಇದ್ದ 250 ಮತಗಳನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ. ಹಿಂದೆ ರಿಟರ್ನ್ ಆಫೀಸರ್ ಮಾನ್ಯ ಮಾಡಿದ್ದಾಗ ಸರಿ ಆಗಿದ್ದದನ್ನು ಈಗ ತಿದ್ದಿದ್ದಾರೆ ಅಂದರೆ ಹೇಗೆ ಎಂದು ಪ್ರಶ್ನಿಸಿದರು. ಜೀವರಾಜ್ 201 ಮತಗಳಿಂದ ಸೋತಿದ್ದರು. ಮರು ಎಣಿಕೆಯಲ್ಲಿ ಅವರಿಗೆ 250 ಮತಗಳು ಜಾಸ್ತಿಯಾಗಿದೆ. ಈ ಬಗ್ಗೆ ಅಧಿಕಾರಿಗಳು, ಚುನಾವಣಾ ತಜ್ಞರ ಜೊತೆ ಮಾತನಾಡಿದ್ದೇನೆ. ಮತ ಎಣಿಕೆಯ ನಂತರ ಎಲ್ಲ ದಾಖಲಾತಿಗಳನ್ನು ಟ್ರಂಕ್‌ನಲ್ಲಿ ಇಟ್ಟು ಕಳುಹಿಸುತ್ತಾರೆ. ಮತ ಎಣಿಕೆ ವೇಳೆ ಕೇಂದ್ರ, ರಾಜ್ಯದಲ್ಲೂ ಬಿಜೆಪಿ ಸರ್ಕಾರ ಇತ್ತು. ಡಬಲ್ ಎಂಜಿನ್ ಸರ್ಕಾರ ಇತ್ತು. ಕಳೆದ ವಿಧಾನಸಭಾ ಚುನಾವಣೆ ವೇಳೆ ಬಿಜೆಪಿ ರಾಜ್ಯದಲ್ಲಿ ಆಡಳಿತದಲ್ಲಿ ಇತ್ತು. ಹೀಗಾಗಿ ಬಿಜೆಪಿಯವರು ಸಿಬ್ಬಂದಿ ಮೂಲಕ ತಿದ್ದಿಸಿದ್ದಾರೆ ಅನಿಸುತ್ತಿದೆ ಎಂದು ಸಿದ್ದರಾಮಯ್ಯ ಆರೋಪಿಸಿದರು.



ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಮರುಎಣಿಕೆ ನ್ಯಾಯಾಲಯದ ಆದೇಶದಂತೆ ನಡೆದಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ರಾಜೇಗೌಡ 201 ಮತಗಳ ಅಂತರದಿಂದ ಗೆದ್ದಿದ್ದರು. ರಾಜೇಗೌಡಗೆ 59,170 ಮತ ಬಂದಿದ್ದವು. ಎದುರಾಳಿ ಜೀವರಾಜ್‌ಗೆ 58,970 ಮತಗಳು ಬಂದಿತ್ತು. ಚುನಾವಣಾ ಏಜೆಂಟರು, ರಿಟರ್ನಿಂಗ್ ಆಫೀರ್ಸ್ ಸಹಿ ಮಾಡಿ ಫಲಿತಾಂಶ ಘೋಷಣೆ ಮಾಡಿದ್ದರು. ನಂತರ ಬಿಜೆಪಿ ಅಭ್ಯರ್ಥಿ ಜೀವರಾಜ್ ಅವರು ಮರು ಎಣಿಕೆ ಮಾಡಬೇಕೆಂದು ಹೈಕೋರ್ಟ್ ಗೆ ಹೋಗಿದ್ದರು. ಅಂಚೆ ಮತಗಳ ಮರುಎಣಿಕೆ ಮಾಡಿ ಲೋಪ ಆಗಿದ್ದರೆ ಪತ್ತೆ ಹಚ್ಚುವಂತೆ ಕೋರ್ಟ್ ಸೂಚಿಸಿತ್ತು. ಕೋರ್ಟ್ ಆದೇಶದಂತೆ ಮರು ಎಣಿಕೆ ನಡೆಯಿತು. ಅಂಚೆ ಮತಗಳ ಮರುಎಣಿಕೆಯಲ್ಲಿ ರಾಜೇಗೌಡಗೆ ಲಭಿಸಿದ್ದ 250 ಮತಗಳು ಅಮಾನ್ಯವಾಗಿವೆ. ಇದು ಹೇಗೆ ಅಮಾನ್ಯ ಆಗುತ್ತದೆ? ಇದನ್ನು ನೋಡಿದಾಗ ಬಿಜೆಪಿಯವರು ಓಟ್ ಚೋರಿ ಮಾಡಿರುವುದು ಸ್ಪಷ್ಟವಾಗಿ ಗೊತ್ತಾಗುತ್ತೆ ಎಂದು ಕಿಡಿಕಾರಿದರು.

**250 ಮತಗಳು ಅಮಾನ್ಯ**

ಮೂರನೇ ಸುತ್ತಿನಲ್ಲಿ ರಾಜೇಗೌಡಗೆ ಬಂದಿದ್ದ ಮತಗಳು ಈಗ ಅಮಾನ್ಯವಾಗಿವೆ. ಹಿಂದೆ ಚುನಾವಣೆ ನಡೆದಾಗ ಅದೇ ಮತಗಳು ಮಾನ್ಯವಾಗಿತ್ತು. ಹಣ್ಣು ತಿಂದವನು ತಪ್ಪಿಸಿಕೊಂಡ, ಸಿಪ್ಪೆ ತಿಂದವನು ಸಿಕ್ಕಾಕಿಕೊಂಡ ಎನ್ನುವಂತಾಗಿದೆ. ಇದು ಬಿಜೆಪಿಯವರು ಮಾಡಿರುವ ಕೆಲಸ. ಇದನ್ನು ಕೇಂದ್ರದ ಮಂತ್ರಿಗಳಾದ ಪ್ರಲ್ಹಾದ ಜೋಷಿ, ಶೋಭಾ ಕರಂದ್ಲಾಜೆ, ವಿಧಾನ ಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಸಮರ್ಥಿಸಿಕೊಂಡಿದ್ದಾರೆ ಎಂದು ಕಿಡಿಕಾರಿದರು.

ಕಳೆದ ಚುನಾವಣೆ ವೇಳೆ ಎಲ್ಲರೂ ಸಹಿ ಮಾಡಿರುವ ದಾಖಲಾತಿಗಳು ಇವೆ.

### ತಿದ್ದುಪಡಿ ಮತಪತ್ರಗಳ ಫಾರೆನ್ಸಿಕ್ ಪರೀಕ್ಷೆ ಅಗತ್ಯ

ನಿಷ್ಪಕ್ಷಪಾತವಾದ ಚುನಾವಣೆ, ಸಂವಿಧಾನದ ಮೇಲೆ ನಂಬಿಕೆ ಇಲ್ಲದವರು ಬಿಜೆಪಿಯವರು. ಹೀಗಾಗಿ ಅಪರಾಧಗಳನ್ನು ಮಾಡಲು ಹಿಂದೆ ಮುಂದೆ ನೋಡೋದಿಲ್ಲ. ಮುಂದೆ ಜನರೇ ಇವರಿಗೆ ಪಾಠ ಕಲಿಸುತ್ತಾರೆ. ತಿದ್ದುಪಡಿ ಮಾಡಿರುವ ಮತಪತ್ರಗಳನ್ನು ಫಾರೆನ್ಸಿಕ್ ಗೆ ಕಳುಹಿಸಬೇಕಿದೆ. ಇದು ಗೊತ್ತಿದ್ದು ಚುನಾವಣಾ ಆಯೋಗ ಫಲಿತಾಂಶ ಘೋಷಣೆ ಮಾಡಿದೆ ಎಂದು ಟೀಕಿಸಿದರು. ರಾಜೇಗೌಡ ದೂರು ಕೊಟ್ಟಿದ್ದಾರೆ, ಎಫ್‌ಐಆರ್ ಆಗಿದೆ. ನ್ಯಾಯಾಲಯಕ್ಕೂ ಹೋಗಿದ್ದಾರೆ. ಚುನಾವಣಾ ಅಬ್ಸರ್ವರ್ ಕ್ಲಿಯರೆನ್ಸ್ ಕೊಟ್ಟ ಮೇಲೆಯೇ ಫಲಿತಾಂಶ ಘೋಷಣೆ ಮಾಡಬೇಕು. ಇವರು ಕೇಳದೆಯೇ ಫಲಿತಾಂಶ ಘೋಷಿಸಿದ್ದಾರೆ. ಇದನ್ನು ಆತುರಾತುರವಾಗಿ ಘೋಷಣೆ ಮಾಡಿರುವುದು ಸರಿಯಲ್ಲ. ಇದನ್ನು ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇವೆ. ನಾವು ಕ್ರಿಮಿನಲ್ ಕೇಸ್ ಹಾಕಿದ್ದೇವೆ. ಪುಟ 2ಕ್ಕೆ

ಆಗಲೇ ಇದರ ಬಗ್ಗೆ ಬಿಜೆಪಿಯವರು ಧ್ವನಿ ಎತ್ತಬಹುದಾಗಿತ್ತು ಅಲ್ಲವೇ? ಹಿಂದೆಯೇ ಮತ ಎಣಿಕೆ ನಂತರ ಬಿಜೆಪಿಯವರು ತಿದ್ದಿಸಿದ್ದಾರೆ ಅನಿಸುತ್ತದೆ. ಮರು ಎಣಿಕೆಗೆ ಕೇಂದ್ರದ ವೀಕ್ಷಕರು ಬಂದಿದ್ದರು. ವೀಕ್ಷಕರೂ ಕೂಡ ಲೋಪ ಆಗಿದೆ ಎಂದು ಚುನಾವಣಾ ಆಯೋಗಕ್ಕೆ ವರದಿ ನೀಡಿದ್ದಾರೆಂಬ ಮಾಹಿತಿ ಇದೆ. ಪುಟ 2ಕ್ಕೆ

## ನಾಯಕತ್ವ ಬದಲಾವಣೆ ಚರ್ಚೆ ಆಗಿಲ್ಲ: ತಿಮ್ಮಾಪುರ್

**ಬೆಂಗಳೂರು:** ರಾಜ್ಯದ ನಾಯಕತ್ವ ಬದಲಾವಣೆ ವಿಚಾರ ಹೈಕಮಾಂಡ್ ಹಂತದಲ್ಲಿ ಚರ್ಚೆಯೇ ಆಗಿಲ್ಲ ಎಂದು ಸಚಿವ ಆರ್.ಬಿ.ತಿಮ್ಮಾಪುರ್ ತಿಳಿಸಿದ್ದಾರೆ.

ಮಾಧ್ಯಮಗಳ ಜೊತೆ ಮಂಗಳವಾರ ಮಾತನಾಡಿದ ಅವರು, ನಾಯಕತ್ವ ಬದಲಾವಣೆ ವಿಚಾರದ ಬಗ್ಗೆ ಹೈಕಮಾಂಡ್ ಮಾತನಾಡುತ್ತಿಲ್ಲ. ಆದರೆ, ಮಾಧ್ಯಮಗಳು ಹೇಳ್ತಿವೆ. ಯತೀಂದ್ರ ಹೇಳೋದು ಅವರ ಅಭಿಪ್ರಾಯ. ಹೈಕಮಾಂಡ್ ನಾಯಕತ್ವ ಬದಲಾವಣೆ ಬಗ್ಗೆ ಚರ್ಚೆ ಮಾಡಿಲ್ಲ. ಶಾಸಕರು ಸಚಿವ ಸ್ಥಾನ ಕೇಳೋದು ತಪ್ಪಲ್ಲ. ಮಲ್ಲಿಕಾರ್ಜುನ ಖರ್ಗೆ ಡೇಟ್ ಕೊಟ್ಟು ಕರೆಯುತ್ತೇನೆ ಅಂತ ಹೇಳಿದ್ದಾರೆ. ಆ ಡೇಟ್ ಇನ್ನೂ ಬಂದಿಲ್ಲ ಎಂದು ತಿಳಿಸಿದರು.

## ಸಮಯಕ್ಕೆ ತಕ್ಕಂತೆ ಸಿಎಂ ಸುಳ್ಳು: ವಿ.ಸೋಮಣ್ಣ ಕಿಡಿ

**ರಾಮನಗರ:** ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸುಳ್ಳು ಹೇಳುವುದರಲ್ಲಿ ಡಾಕ್ಟರೇಟ್ ಕೊಡಬೇಕು. ಎರಡು ಬಾರಿ ಸಿಎಂ ಆದರೂ ಬುದ್ಧಿ ಕಲಿಯದ ಅವರು, ಜನರ ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಕಿಡಿಕಾರಿದರು.

ಶೃಂಗೇರಿ ಮರು ಅಂಚೆ ಮತ ಎಣಿಕೆಯಲ್ಲಿ ಮತ ಡಕಾಯಿತಿ ಆಗಿದೆ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ನಗರದಲ್ಲಿ ಮಂಗಳವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಶೃಂಗೇರಿ ಕ್ಷೇತ್ರದಲ್ಲಿ ಕೋರ್ಟ್ ಆದೇಶದಂತೆ ಮರು ಎಣಿಕೆಯಾಗಿದೆ. ಹೀಗಿರುವಾಗ ಕ್ಷೇತ್ರದಲ್ಲಿ ಮತ ಡಕಾಯಿತಿ ಎಂದು ಬಾಯಿಗೆ ಬಂದಂತೆ ಮಾತನಾಡುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಇವಿಎಂ ಬದಲು ಬ್ಯಾಲೆಟ್ ಪೇಪರ್ ಬೇಕು ಎನ್ನುವ ಕಾಂಗ್ರೆಸ್‌ನವರಿಗೆ ದಾವಣಗೆರೆ ಮತ್ತು ಬಾಗಲಕೋಟೆ ಉಪ ಚುನಾವಣೆಯಲ್ಲಿ ಇವಿಎಂ ಬೇಕಾಯ್ತಾ? ಸಿ.ಎಂ.ಗೆ ಸಮಯಕ್ಕೆ ತಕ್ಕಂತೆ ಸುಳ್ಳು ಹೇಳಿ ಅಭ್ಯಾಸ ಎಂದು ವ್ಯಂಗ್ಯವಾಡಿದರು.

ಖರ್ಗೆ ವಿರುದ್ಧ ಕಿಡಿ: ಸಚಿವ ಪ್ರಿಯಾಂಕ್ ಖರ್ಗೆ ಅವರು ಕೈಲಾಗದವನು ಮೈ ಪರಚಿಕೊಂಡ ಎಂಬಂತೆ ಮಾತನಾಡುತ್ತಾರೆ. ಕೇರಳದಲ್ಲಿ ಅವರ ಪಕ್ಷ ಗೆದ್ದು ಬೀಗುತ್ತಿದೆಯಲ್ಲಾ, ಅಲ್ಲಿ ಎಲ್ಲವೂ ಸರಿ ಇದೆಯೇ? ಅವರು ಗೆದ್ದಾಗ ಮಾತ್ರ ಸರಿ. ಇಲ್ಲದಿದ್ದರೆ, ನಮ್ಮ ಮೇಲೆ ಗೂಬೆ

## ಪಶ್ಚಿಮ ಬಂಗಾಳದಲ್ಲಿ 9ರಂದು ಸಿಎಂ ಪ್ರಮಾಣ

**ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ 15 ವರ್ಷಗಳ ದೀರ್ಘ ಆಡಳಿತ ಕೊನೆಗೊಳಿಸಿದ ಮೊದಲ ಬಿಜೆಪಿ ಸರ್ಕಾರದ ನೂತನ ಮುಖ್ಯಮಂತ್ರಿ ಮೇ 9ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಬಿಜೆಪಿ ಪಶ್ಚಿಮ ಬಂಗಾಳ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಅವರು ಈ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ. ಮೇ 9ರಂದು ರವೀಂದ್ರನಾಥ ಠ್ಯಾಗೋರ್ ಅವರ ಜನ್ಮದಿನವಿದೆ. ಅಂದೇ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಚಿಸಲು ನಿರ್ಧರಿಸಿದೆ. ಪ್ರಮಾಣ ವಚನ ಸಮಾರಂಭಕ್ಕೆ ಎನ್‌ಡಿಎ ಆಡಳಿತವಿರುವ ಎಲ್ಲ ರಾಜ್ಯಗಳ ಸಿಎಂಗಳಿಗೆ ಆಹ್ವಾನ ನೀಡಲಾಗುತ್ತದೆ ಎಂದರು. ಮಮತಾ ಬ್ಯಾನರ್ಜಿಯವರ 15 ವರ್ಷಗಳ ಅಧಿಪತ್ಯವನ್ನು ಬಿಜೆಪಿ ಕೊನೆಗೊಳಿಸಿದೆ. ಈ ಮೂಲಕ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯು ಮೊದಲ ಬಾರಿಗೆ ಸರ್ಕಾರ ರಚಿಸಲಿದೆ.

## ಮನೆ ಕೆಲಸದಾಕೆ ಈಗ ಶಾಸಕಿ

**ಕೋಲ್ಕತ್ತಾ:** ತಿಂಗಳಿಗೆ 2,500 ಸಂಬಳ ಪಡೆಯುತ್ತಿದ್ದ ಮನೆಕೆಲಸ ಮಾಡುವ ಕಲಿತಾ ಮಾಝಿ ಈಗ ಪಶ್ಚಿಮ ಬಂಗಾಳದ ಆಸ್ಗ್ರಾಮ್ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿದ್ದಾರೆ.

2026ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮಾಝಿ 1,07,692 ಮತಗಳನ್ನು ಗಳಿಸಿ, ತಮ್ಮ ಹತ್ತಿರದ ಪ್ರತಿಸ್ಪರ್ಧಿ ಶ್ಯಾಮ ಪ್ರಸನ್ನ ಲೋಹರ್ ಅವರನ್ನು 12,535 ಮತಗಳ ಅಂತರದಿಂದ ಸೋಲಿಸಿದ್ದಾರೆ.

ಗುಸ್ಕಾರ ನಿವಾಸಿ ಮಾಝಿ, ಸಕ್ರಿಯ ರಾಜಕೀಯಕ್ಕೆ ಕಾಲಿಡುವ ಮೊದಲು ನಾಲ್ಕು ಮನೆಗಳಲ್ಲಿ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದರು. ಅವರ ಸಾಧಾರಣ ಹಿನ್ನೆಲೆ ಮತ್ತು ಬಲವಾದ ಸ್ಥಳೀಯ ಸಂಪರ್ಕಗಳಿಂದಾಗಿ ಪ್ರಚಾರದ ಸಮಯದಲ್ಲಿ ಗಮನ ಸೆಳೆದಿದ್ದರು.

## ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಡಲ್ಲ: ಬ್ಯಾನರ್ಜಿ ಪಟ್ಟು!

**ಕೋಲ್ಕತ್ತಾ:** ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ ಎಂದು ಮಮತಾ ಬ್ಯಾನರ್ಜಿ ಪಟ್ಟು ಹಿಡಿದಿದ್ದಾರೆ. ಚುನಾವಣಾ ಫಲಿತಾಂಶವನ್ನು ಕಾನೂನುಬದ್ಧ ಸೋಲು ಎಂದು ಒಪ್ಪಿಕೊಳ್ಳುವುದಿಲ್ಲ ಎಂದು ಹೇಳಿರುವ ಅವರು, ಹಿನ್ನಡೆ ಹೊರತಾಗಿಯೂ ತಮ್ಮ ರಾಜಕೀಯ ಹೋರಾಟವನ್ನು ಮುಂದುವರಿಸುವುದಾಗಿ ತಿಳಿಸಿದ್ದಾರೆ.



ತೃಣಮೂಲ ಕಾಂಗ್ರೆಸ್ (ಟಿಎಂಸಿ) ಭಾರೀ ಸೋಲಿನ ನಂತರ ಕೋಲ್ಕತ್ತಾದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬ್ಯಾನರ್ಜಿ, ದೊಡ್ಡ ಪ್ರಮಾಣದ ರಿಗ್ಗಿಂಗ್, ಮತದಾರರ ಪಟ್ಟಿ ತಿರುಚಿರುವುದು ಮತ್ತು ವ್ಯಾಪಕ ಹಿಂಸಾಚಾರ ನಡೆದಿದೆ ಎಂದು ಆರೋಪಿಸಿದರು. ಬಿಜೆಪಿ 100 ಸ್ಥಾನಗಳನ್ನು ಕಳವು ಮಾಡಿದೆ.

## ಬೌರಿಂಗ್ ಗೋಡೆ ಕುಸಿತ ಪ್ರಕರಣ: 'ಲೋಕಾ' ತನಿಖಾ ತಂಡ ರಚನೆ

**ಬೆಂಗಳೂರು:** ಬೌರಿಂಗ್ ಆಸ್ಪತ್ರೆ ಗೋಡೆ ಕುಸಿದು 7 ಮಂದಿ ಸಾವನ್ನಪ್ಪಿದ ಪ್ರಕರಣದ ತನಿಖೆಗೆ ಲೋಕಾಯುಕ್ತರಿಂದ ವಿಶೇಷ ತಂಡ ರಚನೆ ಮಾಡಲಾಗಿದೆ.

ಘಟನೆ ನಂತರ ಸ್ಥಳಕ್ಕೆ ಭೇಟಿಕೊಟ್ಟಿದ್ದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಖಡಕ್ ವಾರ್ನಿಂಗ್ ಕೊಟ್ಟಿದ್ದರು. ಬಳಿಕ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿತ್ತು. ಈಗ ಪ್ರಕರಣದ ತನಿಖೆಗೆ ವಿಶೇಷ ತಂಡವನ್ನು ರಚನೆ ಮಾಡಲಾಗಿದೆ. ಪೊಲೀಸ್ ಅಧೀಕ್ಷಕ ದರ್ಜೆಯ ಅಧಿಕಾರಿಯನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಲಾಗಿದೆ. ತಂಡದಲ್ಲಿ ಒಬ್ಬರು ಜಿಲ್ಲಾ ನ್ಯಾಯಾಧೀಶರು, ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗದ ಮುಖ್ಯ ಇಂಜಿನಿಯರ್ ಇರಲಿದ್ದಾರೆ.



ತನಿಖೆ ನಡೆಸಿ ಮೇ 16ರ ಒಳಗೆ ವರದಿ ನೀಡಲು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಆದೇಶಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ತನಿಖಾ ತಂಡದ ಸಭೆ ಮಂಗಳವಾರ ನಡೆಯಿತು. ಯಾರಿಗೆಲ್ಲ ನೋಟಿಸ್ ಕೊಟ್ಟು ಪುಟ 2ಕ್ಕೆ

## ಒಂದೇ ಓಟ್‌ನಿಂದ ಸೋತ ಸಚಿವ ಪೆರಿಯಕರುಪ್ಪನ್!

**ಚೆನ್ನೈ:** ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ತಿರುಪ್ಪತ್ತೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸಹಕಾರ ಸಚಿವ ಕೆ.ಆರ್.ಪೆರಿಯಕರುಪ್ಪನ್ ಒಂದೇ ಒಂದು ಮತದಿಂದ ಸೋತಿದ್ದಾರೆ. ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಸೀನಿವಾಸ ಸೇತುಪತಿ ಆರ್ 83,375 ಮತಗಳಿಂದ ಗೆಲುವು ಸಾಧಿಸಿದ್ದಾರೆ. ಪೆರಿಯಕರುಪ್ಪನ್ 83,374 ಮತಗಳೊಂದಿಗೆ ಪರಾಭವಗೊಂಡಿದ್ದಾರೆ.



ಮತ ಎಣಿಕೆಯ ಆರಂಭದಿಂದಲೂ ಪೆರಿಯಕರುಪ್ಪನ್ ಮತ್ತು ಸೀನಿವಾಸ ಸೇತುಪತಿ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಪ್ರತಿ ಸುತ್ತಿನಲ್ಲೂ ಮುನ್ನಡೆಯು ಕ್ಷಣಕ್ಷಣಕ್ಕೂ ಬದಲಾಗುತ್ತಿತ್ತು. ಅಂತಿಮ ಸುತ್ತಿನ ಎಣಿಕೆ ಮುಗಿದಾಗ ಇಬ್ಬರ ನಡುವಿನ ವ್ಯತ್ಯಾಸ ಕೇವಲ ಒಂದು ಮತವಾಗಿತ್ತು.

ಮರು ಎಣಿಕೆಯ ನಂತರವೂ ಫಲಿತಾಂಶದಲ್ಲಿ ಯಾವುದೇ ಬದಲಾವಣೆಯಾಗದ ಕಾರಣ, ಸೀನಿವಾಸ ಸೇತುಪತಿ ಅವರನ್ನು ಪುಟ 2ಕ್ಕೆ

## ಜೀವರಾಜ್ ವಿರುದ್ಧ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ತಡೆ

**ಬೆಂಗಳೂರು:** ಮರು ಮತ ಎಣಿಕೆ ವೇಳೆ ಮತಪತ್ರಗಳನ್ನು ತಿದ್ದಿದ ಆರೋಪಕ್ಕೆ ಸಂಬಂಧಿಸಿದಂತೆ ಶೃಂಗೇರಿ ಶಾಸಕ ಡಿ.ಎನ್.ಜೀವರಾಜ್ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಪ್ರಕರಣದ ಕುರಿತು ಜೀವರಾಜ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರ ರಜಾಕಾಲದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಜೀವರಾಜ್ ಪರ ಹಾಜರಾಗಿದ್ದ ಹಿರಿಯ ವಕೀಲ ಅಶೋಕ ಹಾರನಹಳ್ಳಿ ಅವರ ವಾದ ಆಲಿಸಿದ ನ್ಯಾಯಪೀಠ, ಗೊಂದಲಗಳಿದ್ದರೆ ಚುನಾವಣಾ ತಕರಾರು ಅರ್ಜಿಯಲ್ಲೇ ಉಲ್ಲೇಖಿಸಬೇಕಿತ್ತು. ರಾಜಕೀಯ ಒತ್ತಡದಿಂದ ದೂರು ದಾಖಲಿಸುವುದು ಸರಿಯಲ್ಲ. ಹೀಗಾದರೆ, ಯಾವ ಅಧಿಕಾರಿಯೂ ಸ್ವತಂತ್ರವಾಗಿ ಕೆಲಸ ಮಾಡಲಾಗುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಇದೇ 7ರವರೆಗೆ ಎಫ್‌ಐಆರ್‌ಗೆ ತಡೆ ವಿಚಾರಣೆ ಮುಂದೂಡಿತು.

**ಪ್ರಕರಣದ ಹಿನ್ನೆಲೆ:** 2023ರ ಮೇ 13ರಂದು ಮತ ಎಣಿಕೆ ಮುಗಿದ ಬಳಿಕ ಜೀವರಾಜ್, ಈ ಹಿಂದಿನ ಚುನಾವಣಾಧಿಕಾರಿ ವೇದಮೂರ್ತಿ ಮತ್ತು ಅಂದಿನ ಚಿಕ್ಕಮಗಳೂರು ಜಿಲ್ಲಾಧಿಕಾರಿ ರಮೇಶ್ ಸಂಚು ರೂಪಿಸಿ ಮತಪೆಟ್ಟಿಗೆಗಳ ಸೀಲು ತೆಗೆದು ರಾಜೇಗೌಡ ಅವರಿಗೆ ಬಿದ್ದಿದ್ದ ಒಂದು ಕಟ್ಟಿನ 170 ಮತಗಳನ್ನು ತಿದ್ದಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಮತ ಎಣಿಕೆಯಲ್ಲಿ ಭಾಗಿಯಾಗಿದ್ದ ಏಜೆಂಟ್ ಸುಧೀರ್ ಕುಮಾರ್ ಮುರೊಳ್ಳಿ ಮೇ 3ರಂದು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.



ಈ ದೂರಿನ ಅನ್ವಯ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ 1860ರ (ಐಪಿಸಿ) ಕಲಂ 143 (ಅಕ್ರಮ ಕೂಟ), 465 (ಸುಳ್ಳು ದಾಖಲೆ ಸೃಷ್ಟಿ), 468 (ವಂಚಿಸಲು ಸುಳ್ಳು ಪುಟ 2ಕ್ಕೆ

## ಬೌದ್ಧಿಕ ಅವನತಿಗೆ ಸಾಕ್ಷಿ: ಸಿದ್ದು ವಿರುದ್ಧ ಅಶೋಕ್ ಕಿಡಿ

**ಬೆಂಗಳೂರು:** ರಾಹುಲ್ ಗಾಂಧಿ ಹಿಂಬಾಲಕರ ನಡೆ ಬೌದ್ಧಿಕ ಅವನತಿಗೆ ಸಾಕ್ಷಿ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಕಿಡಿಕಾರಿದ್ದಾರೆ.

ಮರು ಮತ ಎಣಿಕೆಯಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯ ಗೆಲುವಿನ ಬಗ್ಗೆ ಸಿದ್ದರಾಮಯ್ಯ ಅವರು ಓಟ್ ಚೋರಿ ಅಲ್ಲ, ಡಕಾಯಿತಿ ನಡೆದಿದೆ ಎಂಬ ಹೇಳಿಕೆಗೆ ಅವರು ಟ್ವೀಟ್ ಮಾಡಿ ಟೀಕಿಸಿದ್ದಾರೆ.

ಸಿದ್ದರಾಮಯ್ಯ ಅವರೇ, ನ್ಯಾಯಾಲಯದ ಆದೇಶದಂತೆ ನಡೆದ ಪ್ರಕ್ರಿಯೆಯನ್ನ ಡಕಾಯಿತಿ ಎನ್ನುವ ನಿಮ್ಮದು ಬೌದ್ಧಿಕ, ನೈತಿಕ ಅವನತಿಗೆ ಸಾಕ್ಷಿ. ಕೈಯಲ್ಲಿ ಸಂವಿಧಾನದ ಪ್ರತಿಯನ್ನು ಹಿಡಿದು ನಾಟಕ ಮಾಡುವ ರಾಹುಲ್ ಗಾಂಧಿ ಅವರ ಹಿಂಬಾಲಕರಾದ ನಿಮಗೆ ಸಂವಿಧಾನದ ಆಧಾರಸ್ತಂಭವಾದ ನ್ಯಾಯಾಂಗದ ಮೇಲೆ ನಂಬಿಕೆ ಇಲ್ಲದಿರುವುದು ದುರಂತ ಎಂದು ಛೇಡಿಸಿದ್ದಾರೆ.



ಹೈಕೋರ್ಟ್ ಆದೇಶದಂತೆ ನಡೆಯುವ ಪ್ರಕ್ರಿಯೆಯನ್ನು ಡಕಾಯಿತಿ ಎನ್ನುವುದು ನ್ಯಾಯಾಂಗಕ್ಕೆ ಮಾಡಿದ ಅಪಮಾನವಲ್ಲವೇ? ಮರುಎಣಿಕೆ ಎಂದ ಕೂಡಲೇ ಕಾಂಗ್ರೆಸ್ ಇಷ್ಟೊಂದು ಬೆದರುತ್ತಿರುವುದೇಕೆ? ಅಕ್ರಮ ಬಯಲಾಗುವ ಭಯ ಕಾಡುತ್ತಿದೆಯೇ? ಎಂದು ಪ್ರಶ್ನಿಸಿದ್ದಾರೆ.

ನೆನಪಿರಲಿ, ಇದು ಡಕಾಯಿತಿ ಅಲ್ಲ. ನಿಮ್ಮ ಅಕ್ರಮಕ್ಕೆ ಹಿಡಿದ ಕನ್ನಡಿ. ದಮ್ಮಿದ್ದರೆ, ತಾಕತ್ತಿದ್ದರೆ ಮೈಕ್ ಮುಂದೆ ಗರ್ಜಿಸುವುದನ್ನು ಬಿಟ್ಟು ನ್ಯಾಯಾಲಯದಲ್ಲಿ ನಿಮ್ಮ ವಾದ ಮಂಡಿಸಿ ಎಂದು ಗುಡುಗಿದ್ದಾರೆ.

# ರೈಲು ಮಾರ್ಗ: ನಾಲ್ಕು ಪಥದ ಮಾರ್ಗಕ್ಕೆ ಕ್ರಮ

## ವಿ. ಸೋಮಣ್ಣ ಹೇಳಿಕೆ । ರಾಮನಗರದಲ್ಲಿ ಒಡೆಯರ್ ಎಕ್ಸ್‌ಪ್ರೆಸ್ ರೈಲು ನಿಲುಗಡೆ ಆರಂಭ

ರಾಮನಗರ: ಬೆಂಗಳೂರು ಮತ್ತು ಮೈಸೂರು ನಡುವಿನ ದ್ವಿಪಥ ರೈಲು ಮಾರ್ಗವನ್ನು ನಾಲ್ಕು ಪಥದ ಮಾರ್ಗವನ್ನು ಅಭಿವೃದ್ಧಿ ಪಡಿಸಲು ಕ್ರಮವಹಿಸಲಾಗುವುದು ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ಬೆಂಗಳೂರು-ಮೈಸೂರು ಒಡೆಯರ್ ಎಕ್ಸ್‌ಪ್ರೆಸ್ ರೈಲು ರಾಮನಗರದಲ್ಲಿ ನಿಲುಗಡೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಸಾರ್ವಜನಿಕರ ಸುಗಮ ಸಂಚಾರಕ್ಕಾಗಿ ರೈಲ್ವೇ ಹಳಿಗಳ ಬಳಿ ಮೇಲ್ಸೇತುವೆ, ಕೆಳ ಸೇತುವೆ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಅದರಂತೆ ರಾಜ್ಯದ 64 ಮೇಲ್ಸೇತುವೆ, ಕೆಳಸೇತುವೆ ನಿರ್ಮಾಣಕ್ಕೆ 2,900 ಕೋಟಿ ರೂ. ವಿನಿಯೋಗಿಸಲಾಗಿದೆ. ರಾಜ್ಯದ ಪ್ರತೀ ವರ್ಷದ ಕೇಂದ್ರದ ಆಯವ್ಯಯದಲ್ಲಿ ಕರ್ನಾಟಕ ರಾಜ್ಯದ ರೈಲ್ವೇ ಅಭಿವೃದ್ಧಿ ಕಾಮಗಾರಿಗಳಿಗೆ 700ಕ್ಕೂ ಹೆಚ್ಚು ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ ಎಂದು ಹೇಳಿದರು.

### ಒಡೆಯರ್ ರೈಲು ನಿಲುಗಡೆಗೆ ಸಂಸದರು ಕಾರಣ

ಬೆಂಗಳೂರು-ಮೈಸೂರು ಒಡೆಯರ್ ಎಕ್ಸ್‌ಪ್ರೆಸ್ ರೈಲು ರಾಮನಗರದಲ್ಲಿ ನಿಲುಗಡೆಯಾಗಬೇಕು ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಸದಸ್ಯರಾದ ಡಾ. ಮಂಜುನಾಥ್ ಆಗ್ರಹಿಸಿದ್ದರು. ಈ ನಿಲುಗಡೆಯಿಂದಾಗಿ ಜಿಲ್ಲೆಯ ಸಾವಿರಾರು ಜನರಿಗೆ ಅನುಕೂಲವಾಗಲಿದೆ. ಬೆಳೆಯುತ್ತಿರುವ ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಾದ ರಾಮನಗರ, ಕೋಲಾರ, ತುಮಕೂರಿಗೆ ಆಸರೆಯಾಗಲಿದೆ. ಕಳೆದ 30-40 ವರ್ಷಗಳಿಂದ ನೆನಗುದಿಗೆ ಬಿದ್ದಿದ್ದ ಹಲವಾರು ರೈಲ್ವೇ ಕಾಮಗಾರಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಿದರು. ಬೆಂಗಳೂರು-ರಾಮನಗರ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ರಾಮನಗರ ರೈಲ್ವೇ ನಿಲ್ದಾಣವನ್ನು 11 ಕೋಟಿ ರೂ.ಗಳ ಮೊತ್ತದಲ್ಲಿ, ಚನ್ನಪಟ್ಟಣ 12 ಕೋಟಿ ರೂ.ಗಳ ಮೊತ್ತದಲ್ಲಿ ಮೇಲ್ದರ್ಜೆಗೇರಿಸಲಾಗುತ್ತಿದೆ ಹಾಗೂ ಬಿಡದಿ ರೈಲ್ವೇ ನಿಲ್ದಾಣವನ್ನು ಟಯೋಟ ಕಿರ್ಲೋಸ್ಕರ್ ಅವರ ಸಹಕಾರದೊಂದಿಗೆ ಮೇಲ್ದರ್ಜೆಗೇರಿಸಲಾಗುವುದು ಎಂದರು.

ಬೆಂಗಳೂರಿನ ಪಕ್ಕದ ಜಿಲ್ಲೆಯಾದ ಕೋಲಾರಕ್ಕೆ ನೇರ ರೈಲ್ವೇ ಮಾರ್ಗವಿರಲಿಲ್ಲ. ಹೊಸಕೋಟೆ, ಕೋಲಾರ ಮಾರ್ಗವಾಗಿ 43 ಕಿಲೋ ಮೀಟರ್ ರೈಲ್ವೇ ಮಾರ್ಗದ ಅಭಿವೃದ್ಧಿಗೆ ಕಾರ್ಯ ಯೋಜನೆ ರೂಪಿಸಲಾಗಿದೆ. ಇದರಂತೆ ದೇಶದ 1,600ಕ್ಕೂ ಹೆಚ್ಚು ಹೊಸ ರೈಲು ಮಾರ್ಗಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಿದರು.

ಕರ್ನಾಟಕ ರಾಜ್ಯದಲ್ಲಿ 13 ವಂದೇ ಭಾರತ್ ರೈಲುಗಳು ಸಂಚರಿಸುತ್ತಿದೆ. ಬೆಂಗಳೂರು-ಮಂಗಳೂರು ವಂದೇ ಭಾರತ್ ರೈಲನ್ನು ಶೀಘ್ರದಲ್ಲೇ ಆರಂಭಿಸಲಾಗುವುದು ಎಂದರು.

### ರೈಲು ನಿಲುಗಡೆ: ಹೋರಾಟದ ಫಲ - ಇಕ್ಬಾಲ್ ಹುಸೇನ್

ರಾಮನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಇಕ್ಬಾಲ್ ಹುಸೇನ್ ಅವರು ಮಾತನಾಡಿ, ಹಲವಾರು ವರ್ಷಗಳ ಹೋರಾಟದ ಫಲವಾಗಿ ಬೆಂಗಳೂರು-ಮೈಸೂರು ಒಡೆಯರ್ ಎಕ್ಸ್‌ಪ್ರೆಸ್ ರೈಲು ನಿಲುಗಡೆಗೆ ಚಾಲನೆ ನೀಡಿರುವುದು ಅಭಿನಂದನಾರ್ಹ, ನಮ್ಮದೇ ಜಿಲ್ಲೆಯವರಾದ ವಿ. ಸೋಮಣ್ಣ ಅವರ ಕಾಳಜಿಯಿಂದಾಗಿ ಈ ಕಾರ್ಯವಾಗಿದೆ ಎಂದರು. ರಾಮನಗರದಲ್ಲಿ 4 ರಿಂದ 5 ಸ್ಥಳಗಳಲ್ಲಿ ಮೇಲ್ಸೇತುವೆ ನಿರ್ಮಾಣ ವಾಗಬೇಕಿದೆ. ಈ ಮೇಲ್ಸೇತುವೆ ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳು, ವ್ಯಾಪಾರಿಗಳು ಸೇರಿದಂತೆ ಪ್ರತಿದಿನ 60-70 ಸಾವಿರ ಜನರು ಸಂಚರಿಸುತ್ತಾರೆ. ಅದೇ ರೀತಿ ರಾಮನಗರ ರೈಲು ನಿಲ್ದಾಣದಲ್ಲಿ ಎಕ್ಸಲೇಟರ್ ಮತ್ತು ವಿಶ್ರಾಂತಿ ಗೃಹ ನಿರ್ಮಿಸುವಂತೆ ಕೋರಿದರು.

### ಮೇಲ್ದರ್ಜೆಗೇರಿದ ನಿಲ್ದಾಣ, ಸೆಪ್ಟಂಬರ್‌ನಲ್ಲಿ ಉದ್ಘಾಟನೆ - ಡಾ.ಸಿ.ಎನ್.ಮಂಜುನಾಥ್

ಸಂಸದರಾದ ಡಾ. ಸಿ.ಎನ್. ಮಂಜುನಾಥ್ ಅವರು ಮಾತನಾಡಿ, ದಶಕಗಳ ಕನಸಾದ ಒಡೆಯರ್ ರೈಲು ರಾಮನಗರದ ನಿಲುಗಡೆ ಇಂದು ನನಸಾಗಿದೆ. ರಾಮನಗರದಲ್ಲಿ ನಿಲ್ಲಲು ಸಾಕಷ್ಟು ಶ್ರಮಿಸಬೇಕಾಯಿತು. ಬೆಂಗಳೂರು-ಮೈಸೂರು ನಡೆವೆ ಪ್ರತೀ ದಿನ 47 ರೈಲುಗಳು ಸಂಚರಿಸುತ್ತಿವೆ. ಒಡೆಯರ್ ಎಕ್ಸ್‌ಪ್ರೆಸ್ ರೈಲು ಸೂಪರ ಫಾಸ್ಟ್ ರೈಲು. ರಾಮನಗರದಲ್ಲಿ ನಿಲುಗಡೆ ಮಾಡಲು ಸುರಕ್ಷತಾ ಕ್ರಮಗಳು ಅಗತ್ಯ, ಅಧಿಕಾರಿಗಳ ನಿರಂತರ ಸಂಪರ್ಕದಿಂದ ಇದು ಸಾಧ್ಯವಾಯಿತು. ಇದೊಂದು ಐತಿಹಾಸಿಕ ನಿರ್ಧಾರ ಎಂದರು.

ಸೆಪ್ಟಂಬರ್‌ನಲ್ಲಿ ಮೇಲ್ದರ್ಜೆಗೊಂಡ ರಾಮನಗರ ರೈಲು ನಿಲ್ದಾಣ ಲೋಕಾರ್ಪಣೆಗೊಳ್ಳಲಿದೆ. ಚನ್ನಪಟ್ಟಣ ರೈಲು ನಿಲ್ದಾಣವನ್ನು 12 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗುತ್ತಿದೆ. ಚನ್ನಪಟ್ಟಣದ ಎಲೆಕೆರೆ ಬ್ರಿಡ್ಜ್‌ಅನ್ನು ಸಾರ್ವಜನಿಕರೇ ಉದ್ಘಾಟನೆ ಮಾಡಿದ್ದು ಇನ್ನು ಅಧಿಕೃತವಾಗಿ ಉದ್ಘಾಟನೆಯಾಗಬೇಕಿದೆ.

ಈ ಸಂದರ್ಭದಲ್ಲಿ ಸಾರಿಗೆ, ಮುಜರಾಯಿ ಇಲಾಖೆ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗಾರೆಡ್ಡಿ, ರಾಮನಗರ ನಗರಸಭೆ ಅಧ್ಯಕ್ಷರಾದ ಶೇಷಾದ್ರಿ (ಶಶಿ), ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಚೇತನ್ ಕುಮಾರ್, ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ರೈಲ್ವೇ ವಿಭಾಗೀಯ ಅಧಿಕಾರಿ (ಎಡಿಎಲ್‌ಎಂ) ಪ್ರವೀಣ್ ಕಾತರಕಿ ಸೇರಿದಂತೆ, ಜನಪ್ರತಿನಿಧಿಗಳು, ಗಣ್ಯರು, ಅಧಿಕಾರಿಗಳು ಹಾಜರಿದ್ದರು.



### ಪ್ರಧಾನಿ ಮೋದಿ ಅವರ ಅಭಿವೃದ್ಧಿ ಚಿಂತನೆಯಿಂದಾಗಿ ಬಿಜೆಪಿ ಗೆಲುವು - ಸಚಿವ ವಿ.ಸೋಮಣ್ಣ

ರಾಮನಗರ; ಪ್ರಧಾನಿ ಮೋದಿರವರ ಅಭಿವೃದ್ಧಿ ಚಿಂತನೆ ದೇಶದ ಜನರ ಗಮನ ಸೆಳೆದಿದೆ. ಹೀಗಾಗಿಯೇ ಬಿಜೆಪಿ ಗೆಲುವು ಸಾಧಿಸುತ್ತಿದೆ ಎಂದು ಇತ್ತೀಚೆಗೆ ನಡೆದ ಪಂಚರಾಜ್ಯಗಳ ಚುನಾವಣಾ ಫಲಿತಾಂಶದ ಬಗ್ಗೆ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ವಿಶ್ಲೇಷಿಸಿದ್ದಾರೆ.

ಬೆಂಗಳೂರು - ಮೈಸೂರು ನಡುವೆ ಸಂಚರಿಸುವ ಒಡೆಯರ್ ಎಕ್ಸ್‌ಪ್ರೆಸ್ ರೈಲಿಗೆ ರಾಮನಗರದಲ್ಲಿ ನಿಲುಗಡೆಗೆ ಚಾಲನೆ ನೀಡಲು ನಗರಕ್ಕೆ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಕಾಂಗ್ರೆಸ್ ಪಕ್ಷದ ಸೋಲಿನ ಕುರಿತು ಮಾತನಾಡಿದ ಅವರು ಪಂಚರಾಜ್ಯಗಳ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿನ ಬಗ್ಗೆ ಮಹಿಳಾ ಮೀಸಲಾತಿಯನ್ನು ವಿರೋಧಿಸಿದ್ದರಿಂದಲೇ ಕಾಂಗ್ರೆಸ್‌ಗೆ ಮಹಿಳೆಯರು ಗೂಸ ಕೊಟ್ಟಿದ್ದಾರೆ ಎಂದು ಅವರು ಟೀಕಿಸಿದರು.

2014ರಲ್ಲಿ ಕಾಂಗ್ರೆಸ್ ಎಷ್ಟು ರಾಜ್ಯಗಳಲ್ಲಿ ಅಧಿಕಾರದಲ್ಲಿತ್ತು. ಈಗ ಎಷ್ಟು ರಾಜ್ಯಗಳಲ್ಲಿದೆ. ಈಗ ನಿಮ್ಮ ಇಂಡಿಯಾ ಒಕ್ಕೂಟ ಏನಾಯಿತು ಎಂದು ಪ್ರಶ್ನಿಸಿದರು. ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳ ಗೆಲುವು ಚುನಾವಣಾ ಆಯೋಗದ ಗೆಲುವು ಎಂಬ ಸಚಿವ ಪ್ರಿಯಾಂಕಾ ಖರ್ಗೆ ಹೇಳಿದ್ದಾರಲ್ಲ ಎಂಬ ಪ್ರಶ್ನೆಗೆ ವಿ.ಸೋಮಣ್ಣ, ಪ್ರಿಯಾಂಕಾ ಖರ್ಗೆ ಅವರು "ಕೈಲಾಗದವನು ಮೈ ಪರಚಿಕೊಂಡ" ಎಂಬಂತೆ ಮಾತನಾಡುತ್ತಾರೆ, ಕೇರಳದಲ್ಲಿ ಗೆದ್ದು ಬೀಗುತ್ತಿದ್ದಾರಲ್ಲ ಅಲ್ಲಿ ಸರಿ ಇದಿಯಾ.

ಕಾಂಗ್ರೆಸ್ ಗೆದ್ದಾಗ ಮಾತ್ರ ಎಲ್ಲವೂ ಸರಿ, ಇಲ್ಲವಾದರೆ ಬಿಜೆಪಿ ಮೇಲೆ ಗೂಬೆ ಕೂರಿಸುತ್ತಾರೆ. ಅವರಲ್ಲಿ ಮನುಷ್ಯತ್ವ ಇಲ್ಲ. ಅಂಬೇಡ್ಕರ್ ಎಲ್ಲರಿಗೂ ಅನ್ವಯಿಸುವ ಸಂವಿಧಾನ ಕೊಟ್ಟಿದ್ದಾರೆ. ಕಾನೂನು ಎಲ್ಲರಿಗೂ ಒಂದೇ. ಯಾರೂ ಕಾನೂನು ಮೀರುವ ಕೆಲಸ ಮಾಡಲ್ಲ. ಪ್ರಿಯಾಂಕಾ ಖರ್ಗೆ ಜಾಣಕುರುಡರ ಹಾಗೆ ಮಾತನಾಡಬಾರದು ಎಂದು ತಿರುಗೇಟು ನೀಡಿದರು.

ಶೃಂಗೇರಿ ಕ್ಷೇತ್ರದಲ್ಲಿ ವೋಟ್ ಡಕಾಯಿತಿ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯರವರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಕೋರ್ಟ್ ಆದೇಶದಂತೆ ಮರುಎಣಿಕೆ ಆಗಿದೆ. ಈಗ ಅವರದ್ದು ಏನೂ ಉಳಿದಿಲ್ಲ ಅಂತ ಬಾಯಿಗೆ ಬಂದಹಾಗೆ ಮಾತನಾಡುತ್ತಿದ್ದಾರೆ. ಮುಖ್ಯಮಂತ್ರಿಗಳು ಜನರ ದಾರಿ ತಪ್ಪಿಸುವ ಕೆಲಸ ಮಾಡುವ ಸಣ್ಣತನ ಬಿಡಬೇಕು ಎಂದರು.

ಸಿದ್ದರಾಮಯ್ಯರವರು ಎರಡು ಮುಖ್ಯಮಂತ್ರಿಯಾಗಿದ್ದರು ಬುದ್ಧಿ ಕಲಿತಿಲ್ಲ. ವೋಟ್ ಚೋರಿ ಕಾಂಗ್ರೆಸ್‌ನ ಚಾಳಿಯೇ ಹೊರತು ಬಿಜೆಪಿಯದಲ್ಲ. ನಾವು ಆ ಕೆಲಸ ಮಾಡಲ್ಲ. ನಮಗೆ ಇವಿಎಂ ಬೇಡ, ಬ್ಯಾಲೆಟ್ ಪೇಪರ್ ಬೇಕು ಅಂತ ಕಾಂಗ್ರೆಸ್ ನವರು ಹೇಳುತ್ತಿದ್ದರು. ಹಾಗಾದರೆ ದಾವಣಗೆರೆ ಮತ್ತು ಬಾಗಲಕೋಟೆ ಉಪಚುನಾವಣೆಯಲ್ಲಿ ಗೆಲ್ಲಲು ಇವಿಎಂ ಬೇಕಾಯಿತಾ ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ಸಮಯಕ್ಕೆ ತಕ್ಕಂತೆ ಸುಳ್ಳು ಹೇಳಿ ಅಭ್ಯಾಸ. ಸುಳ್ಳು ಹೇಳುವುದರಲ್ಲಿ ಅವರಿಗೆ ಡಾಕ್ಟರೇಟ್ ಕೊಡಬೇಕು. ತಮ್ಮ ಪಾಪದ ಕೆಲಸ ಮುಚ್ಚಿಕೊಳ್ಳಲು ಬಿಜೆಪಿ ಕಡೆ ಕೈ ತೋರಿಸುತ್ತಿದ್ದಾರೆ.ರಾಜ್ಯ ಸರ್ಕಾರ ತೀಟೆ ಮಾತುಗಳನ್ನಾಡುವುದನ್ನು ಬಿಟ್ಟು ಜನರ ಪರವಾಗಿ ಕೆಲಸ ಮಾಡಲಿ ಎಂದು ವಿ.ಸೋಮಣ್ಣ ಸಲಹೆ ನೀಡಿದರು.

---

## ಮೇ9ಕ್ಕೆ ಉದ್ಯೋಗಮೇಳ

ಮೈಸೂರು: ತಮ್ಮ ಎಟಿಎಂಇ ಕಾಲೇಜಿನಲ್ಲಿ ಮೇ 9 ರಂದು ಎಂಜಿನಿಯರಿಂಗ್ ಉದ್ಯೋಗಾವಕಾಶ ಅನ್ವೇಷಣೆಯ ಮುಕ್ತ ದಿನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಚಾರ್ಯ ಡಾ. ಎಲ್. ಬಸವರಾಜ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು, ಪಿಯುಸಿ ಉತ್ತೀರ್ಣರಾದವರು, ಡಿಪ್ಲೊಮಾ ವಿದ್ಯಾರ್ಥಿಗಳು, ಪೋಷಕರು ಬೆಳಗ್ಗೆ 9ಕ್ಕೆ ಆರಂಭವಾಗಿ ಸಂಜೆವರೆಗೂ ನಡೆಯುವ ಈ ಕಾರ್ಯಕ್ರಮದಲ್ಲಿ ಭಾಗಿಯಾಗಬಹುದಾಗಿದೆ. ಈ ವೇಳೆ ಎಟಿಎಂಇ ವಿದ್ಯಾಸರೆ ವಿದ್ಯಾರ್ಥಿ ವೇತನ ಕುರಿತು ಮಾಹಿತಿ ನೀಡಲಾಗುವುದು. ಪಾಲ್ಗೊಂಡವರಿಗೆ ಕ್ಯಾಂಪಸ್ ಟೂರ್, ನೇರ ಪ್ರಾಜೆಕ್ಟ್ ಪ್ರದರ್ಶನ, ಸಂವಾದ, ಸಾಂಸ್ಕೃತಿಕ ಚಟುವಟಿಕೆ, ಮನರಂಜನಾ ಆಟಗಳು, ಸೃಜನಾತ್ಮಕ ವಿಡಿಯೋಗ್ರಫಿ ಸ್ಪರ್ಧೆಗಳು ಸಹಾ ಇರಲಿವೆ. 50 ಸಾವಿರ ಮೌಲ್ಯದ ಬಹುಮಾನ ಗೆಲ್ಲಲು ಅವಕಾಶವಿದೆ. ಹೆಚ್ಚಿನ ಮಾಹಿತಿಗೆ ದೂ. 90369 26363 ನ್ನುಸಂಪರ್ಕಿಸಬಹುದಾಗಿದೆ ಎಂದರು.ಡಾ.ಸಚ್ಚಿದಾನಂದಮೂರ್ತಿ, ಡಾ.ಕೆ.ಶ್ರೀನಿವಾಸ್, ಡಾ.ಎಲ್.ರಾಘವೇಂದ್ರ ಇದ್ದರು.



---

## ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಶಿಲ್ಪಾ ಮಂಜುನಾಥ್ ಆಯ್ಕೆ

**ಬೂತ್ ಮಟ್ಟದಿಂದ ಪಕ್ಷ ಸಂಘಟಿಸಲು ನೂತನ ಅಧ್ಯಕ್ಷೆಗೆ ಸೂಚನೆ**

ಕೆ.ಆರ್.ಪೇಟೆ: ತಾಲೂಕು ಬಿಜೆಪಿ ಮಹಿಳಾ ಘಟಕದ ನೂತನ ಅಧ್ಯಕ್ಷೆಯಾಗಿ ಶಿಲ್ಪಾ ಮಂಜುನಾಥ್ ನೇಮಕಗೊಂಡಿದ್ದಾರೆ. ಕಳೆದ ಹಲವು ವರ್ಷಗಳಿಂದ ಸಾಮಾನ್ಯ ಕಾರ್ಯಕರ್ತೆಯಾಗಿ ಪಕ್ಷದಲ್ಲಿ ಸಕ್ರಿಯರಾಗಿದ್ದ ಶಿಲ್ಪಾ ಅವರ ಕಾರ್ಯವೈಖರಿಯನ್ನು ಗುರುತಿಸಿ, ಮಂಡ್ಯ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಮಂಗಳಾ ನವೀನ್ ಈ ನೇಮಕಾತಿ ಆದೇಶ ಹೊರಡಿಸಿದ್ದಾರೆ.

ಮಾಜಿ ಸಚಿವ ಕೆ.ಸಿ. ನಾರಾಯಣಗೌಡರ ನಿವಾಸದ ಆವರಣದಲ್ಲಿ ಆಯೋಜಿಸಿದ್ದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಸಾರಂಗಿ ನಾಗರಾಜು ಈ ಘೋಷಣೆ ಮಾಡಿದರು.

ಕ್ಷೇತ್ರದ ಅಭಿವೃದ್ಧಿಗೆ ಮಹಿಳೆಯರ ಪಾತ್ರ ಮುಖ್ಯ: ಸಭೆಯಲ್ಲಿ ಮಾತನಾಡಿದ ಮುಖಂಡರು, ಬಿಜೆಪಿ ಪಕ್ಷವು ಮಹಿಳೆಯರಿಗೆ ಸದಾ ಹೆಚ್ಚಿನ ಪ್ರಾಧಾನ್ಯತೆ ನೀಡುತ್ತಾ ಬಂದಿದೆ. ಮುಂಬರುವ 2028ರ ವಿಧಾನಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಹಿಳಾ ಕಾರ್ಯಕರ್ತರು ಬೂತ್ ಮಟ್ಟದಿಂದ ಪಕ್ಷವನ್ನು ಬಲಪಡಿಸಬೇಕು. ಕೃಷ್ಣರಾಜಪೇಟೆ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧಿಸಲಿರುವ ಕೆ.ಸಿ. ನಾರಾಯಣಗೌಡರ ಗೆಲುವಿಗಾಗಿ ಶ್ರಮಿಸಬೇಕು ಎಂದು ಮಂಗಳಾ ನವೀನ್ ತಿಳಿಸಿದರು.





### ಸಾಮಾನ್ಯ ಕಾರ್ಯಕರ್ತೆಗೆ ಸಂದ ಗೌರವ

ನೂತನ ಜವಾಬ್ದಾರಿ ಸ್ವೀಕರಿಸಿ ಮಾತನಾಡಿದ ಶಿಲ್ಪಾ ಮಂಜುನಾಥ್, "ಸರ್ವರಿಗೂ ಸಮಪಾಲು, ಸಮಬಾಳು ಎಂಬ ತತ್ವವನ್ನು ಬಿಜೆಪಿ ಪಾಲಿಸುತ್ತಿದೆ. ಸಾಮಾನ್ಯ ಕಾರ್ಯಕರ್ತೆಯಾಗಿದ್ದ ನನ್ನನ್ನು ನಂಬಿ ಈ ಜವಾಬ್ದಾರಿ ನೀಡಿರುವುದು ಪೂರ್ವ ಜನ್ಮದ ಪುಣ್ಯ. ನನ್ನ ನೇಮಕಕ್ಕೆ ಸಹಕರಿಸಿದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೆ.ಸಿ. ನಾರಾಯಣಗೌಡ, ಜಿಲ್ಲಾಧ್ಯಕ್ಷ ಇಂದ್ರೇಶ್ ಹಾಗೂ ಮಂಜುಳಾ ನವೀನ್ ಸೇರಿದಂತೆ ತಾಲೂಕಿನ ಎಲ್ಲಾ ಮುಖಂಡರಿಗೆ ಧನ್ಯವಾದ ಸಲ್ಲಿಸುತ್ತೇನೆ," ಎಂದರು.

### ಪ್ರತಿಭಾ ಪುರಸ್ಕಾರ

ಇದೇ ಸಂದರ್ಭದಲ್ಲಿ 2026ನೇ ಸಾಲಿನ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾದ ವಿದ್ಯಾರ್ಥಿನಿಯರನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು. ಕಾರ್ಯಕ್ರಮದಲ್ಲಿ ತಾಲೂಕು ಅಧ್ಯಕ್ಷ ಸಾರಂಗಿ ನಾಗರಾಜು, ಮುಖಂಡರಾದ ಮಂಜುನಾಥ್, ರಾಮಯ್ಯ, ರಾಜು, ಜಿಲ್ಲಾ ಮಹಿಳಾ ಘಟಕದ ವೀಣಾ, ಶೋಭಾ, ಪುಟ್ಟಮ್ಮ, ಶೃತಿ, ಭಾಗ್ಯ, ದೇವಿರಮ್ಮ, ನಿರ್ಮಲ, ಸುಜಾತ, ಸುನಂದಾ, ಸರೋಜಮ್ಮ, ಶಾಂತಮ್ಮ ಹಾಗೂ ಪತ್ರಕರ್ತ ಕೆ.ಆರ್. ನೀಲಕಂಠ ಸೇರಿದಂತೆ ನೂರಾರು ಮಹಿಳಾ ಕಾರ್ಯಕರ್ತರು ಉಪಸ್ಥಿತರಿದ್ದರು.

---

**ಸಾರ್ವಜನಿಕರಿಂದ ಆಕ್ಷೇಪಕ್ಕೆ ಅರ್ಜಿ**

## ಫ್ಲೈಓವರ್, ರಸ್ತೆ ಅಗಲೀಕರಣಕ್ಕೆ 561 ಮರ ತೆರವು ಪ್ರಸ್ತಾಪ

ಮೈಸೂರು: ಬೆಂಗಳೂರು ರಸ್ತೆಯ ಮೈಸೂರು ಮಣಿಪಾಲ್ ಆಸ್ಪತ್ರೆ ಬಳಿ ಪ್ಲೈಓವರ್ ನಿರ್ಮಾಣ ಹಾಗೂ ನಂಜನಗೂಡು, ತಿ.ನರಸೀಪುರ ರಸ್ತೆಯ ಅಗಲೀಕರಣಕ್ಕಾಗಿ 561 ಮರಗಳ ತೆರವಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮನವಿ ಮಾಡಿದ್ದು, ಈ ಸಂಬಂಧ ಅರಣ್ಯ ಇಲಾಖೆ ಮೇ.7ರಂದು ಸಂಜೆ 5 ಗಂಟೆಯೊಳಗೆ ಆಕ್ಷೇಪಣೆಯಿದ್ದರೆ ಇ-ಮೇಲ್ ಅಥವಾ ಅಂಚೆ ಮೂಲಕ ಸಲ್ಲಿಸುವಂತೆ ಕೋರಿದೆ.

ಮಣಿಪಾಲ್ ಆಸ್ಪತ್ರೆ ಕಡೆಯಿಂದ ಸಿದ್ದಿಕ್ಕಿ ನಗರ. ಬನ್ನಿಮಂಟಪ ಹಾಗೂ ಫೌಂಟೇನ್ ವೃತ್ತದ ಕಡೆಗೆ ಬರುವ ರಸ್ತೆಯಲ್ಲಿ ಕೆಲವು ಮರಗಳು ಫ್ಲೈಓವರ್ ನಿರ್ಮಾಣಕ್ಕೆ ಅಡಚಣೆಯಾಗಿದ್ದು, ಅವುಗಳನ್ನು ತೆರವು ಮಾಡುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮನವಿ ಮಾಡಿದೆ. ಅಲ್ಲದೆ, ನಂಜನಗೂಡು ರಸ್ತೆಯಲ್ಲಿ ಮಂಡಕಳ್ಳಿ, ಕಡಕೊಳ ಬಳಿ, ತಿ.ನರಸೀಪುರ ರಸ್ತೆ ಅಗಲೀಕರಣಕ್ಕೆ ವರುಣ ವೃತ್ತ, ದುದ್ದಗೆರೆ, ಪುಟ್ಟೇಗೌಡನಹುಂಡಿ, ಎಂ.ಸಿ. ಹುಂಡಿ ಬಳಿಯೂ ಕೆಲವು ಮರಗಳನ್ನು ತೆರವು ಮಾಡುವಂತೆ ಆರಣ್ಯ ಇಲಾಖೆಗೆ ಮನವಿ ಸಲ್ಲಿಸಲಾ ಗಿದೆ. ಈ ಮನವಿಯನ್ನು ಪುರಸ್ಕರಿಸಿರುವ ಅರಣ್ಯ ಇಲಾಖೆ ಸಾರ್ವಜನಿಕ ರಿಂದ ಆಕ್ಷೇಪಣೆಗೆ ಕಾಲಾವಕಾಶ ನೀಡಿದೆ.



ಫ್ಲೈಓವರ್‌ಗೆ 350 ಮರ ಹನನ: ಮೈಸೂರು-ಬೆಂಗಳೂರು ರಸ್ತೆಯ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ನಿರ್ಮಿಸುತ್ತಿರುವ ಫ್ಲೈಓವರ್ ವಿಸ್ತರಣೆಗೆ 350 ಮರಗಳನ್ನು ತೆರವು ಮಾಡಬೇಕಾದ ಅನಿ ವಾರ್ಯತೆ ಎದುರಾಗಿದೆ. ಈಗಾಗಲೇ ಪ್ಲೈಓವರ್ ಕಾಮಗಾರಿಗೆ ಬೃಹತ್ ಫಿಲ್ಲರ್ ನಿರ್ಮಾಣ ಕಾರ್ಯ ಬಿರುಸಾಗಿ ಸಾಗಿದೆ. ರಿಂಗ್ ರಸ್ತೆಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಪ್ಲೈಓವರ್‌ಗೆ ಬನ್ನಿಮಂಟಪದ ರಸ್ತೆ, ಸಿದ್ದಿಕ್ಕಿನಗರದ ರಸ್ತೆ ಹಾಗೂ ರಿಂಗ್ ರಸ್ತೆಯ ಎರಡೂ ಬದಿಯಲ್ಲಿರುವ ಮರಗಳನ್ನು ತೆರವು ಮಾಡಲು ಗುರುತಿಸಲಾಗಿದೆ. ಫ್ಲೈಓವರ್‌ಗೆ ಸಿದ್ದಿಕ್ಕಿನಗರದಿಂದ ಫೌಂಟೇನ್ ವೃತ್ತದ ಕಡೆಗೆ ಬರುವ ರಸ್ತೆಯಲ್ಲಿ 19 ಮರ, ಫ್ಲೈಓವರ್ ನಿರ್ಮಾಣ ಕಾಮಗಾರಿಗೆ ತೆರವು ಮಾಡಲು ಗುರುತಿಸಿರುವ ಮರಗಳು. ಬನ್ನಿಮಂಟಪದ ರಸ್ತೆಯ ಪಾರ್ಕ್ ಆವರಣದಲ್ಲಿ ರುವ 256 ಗಿಡ, ಮರ, ಮಣಿಪಾಲ್ ಜಂಕ್ಷನ್ ನಿಂದ ಹುಣಸೂರು ಕಡೆಗೆ ಹೋಗುವ ರಿಂಗ್ ರಸ್ತೆಯ ವಿಭಜಕದಲ್ಲಿರುವ 52 ಮರ, ಮಣಿಪಾಲ್ ಜಂಕ್ಷನ್ ನಿಂದ ಮಹದೇವಪುರ(ಬನ್ನೂರು) ಕಡೆಗೆ ಹೋಗುವ ರಿಂಗ್ ರಸ್ತೆಯ ವಿಭಜಕದಲ್ಲಿರುವ 20 ಮರಗಳನ್ನು ತೆರವು ಮಾಡಲು ಗುರುತಿಸ ಲಾಗಿದೆ. ಈ 350 ಮರಗಳಲ್ಲಿ 3 ಶ್ರೀಗಂಧದ ಮರಗಳು ಸೇರಿದಂತೆ 347 ಜಾತಿಯ ಮರಗಳು ಸೇರಿವೆ. ಮೈಸೂರು-ನಂಜನಗೂಡು(ರಾಷ್ಟ್ರೀಯ ಹೆದ್ದಾರಿ 766) ಮುಖ್ಯರಸ್ತೆಯಲ್ಲಿ ಕಡಕೊಳದ ಟಿವಿಎಸ್ ಕಾರ್ಖಾನೆ ವೃತ್ತ ಹಾಗೂ ಮಂಡಕಳ್ಳಿ ಬಳಿ ರಸ್ತೆ ಅಗಲೀಕರಣಕ್ಕೆ 15 ಮರ ತೆರವಿಗೆ ಗುರುತಿಸಲಾಗಿದೆ. ಕಡಕೊಳದ ಟಿವಿಎಸ್ ಸರ್ಕಲ್ ಬಳಿ 11 ಮರ ಹಾಗೂ ಮಂಡಕಳ್ಳಿ ಬಳಿ 4 ಮರಗಳು ಸೇರಿವೆ.

ತಿ.ನರಸೀಪುರ(ರಾಷ್ಟ್ರೀಯ ಹೆದ್ದಾರಿ 766) ರಸ್ತೆಯ ಅಗಲೀಕರಣ ಕಾಮಗಾರಿಗಾಗಿ ವಿವಿಧೆಡೆ 196 ಮರಗಳನ್ನು ತೆರವು ಮಾಡುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮನವಿ ಮಾಡಿದೆ. ಅದರಲ್ಲಿ ವರುಣ ವೃತ್ತದಲ್ಲಿ 26 ಮರ, ದುದ್ದಗೆರೆಯಿಂದ ಪುಟ್ಟೇಗೌಡನ ಹುಂಡಿವರೆಗೆ ರಸ್ತೆಯ ಎರಡೂ ಬದಿಯಲ್ಲಿರುವ 110 ಮರ ಹಾಗೂ ಎಂ.ಸಿ.ಹುಂಡಿ ಬಳಿ ರಸ್ತೆ ಬದಿಯಲ್ಲಿರುವ 60 ಮರಗಳನ್ನು ತೆರವು ಮಾಡುವಂತೆ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಲಾಗಿದೆ. ಅರಣ್ಯ ಇಲಾಖೆ ಪ್ರತ್ಯೇಕ ಮೂರು ಸ್ಥಳಗಳಲ್ಲಿ 561 ಮರಗಳ ತೆರವು ಮಾಡಲು ಹೆದ್ದಾರಿ ಪ್ರಾಧಿಕಾರ ಕೋರಿರುವ ಮನವಿ ಮೇರೆಗೆ ಸಾರ್ವಜನಿಕರಿಂದ ಆಕ್ಷೇಪವಿದ್ದರೆ ಸಲ್ಲಿಸುವಂತೆ ಕೋರಿದೆ.ಇ-ಮೇಲ್ ಹಾಗೂ ಅಂಚೆ ಮೂಲಕವೂ ಮರಗಳ ಹನನಕ್ಕೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ. ಮೇ.7ರಂದು ಸಂಜೆ 5.30ರೊಳಗೆ ಆಕ್ಷೇಪಣೆ ಸಲ್ಲಿಸಲು ಗಡುವು ನೀಡಲಾಗಿದೆ.

### ಸಭೆ ಕರೆಯಲು ಪರಿಸರಕ್ಕಾಗಿ ನಾವು ಸಂಘಟನೆ ಮನವಿ

561 ಮರಗಳನ್ನು ಕಡಿಯಲು ಮಾಹಿತಿ ನೀಡದಿರುವುದು ಸರಿಯಲ್ಲ. ಇದರಿಂದ ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸುವುದಾದರೂ ಹೇಗೆ? ಇದು ತುಂಬಾ ಗಂಭೀರವಾದ ಲೋಪವಾಗಿದೆ. ಆದುದರಿಂದ 561 ಮರಗಳನ್ನು ಕಡಿಯಲು ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸಲು ಅನುಕೂಲ ಆಗುವಂತೆ, ಈ ವಿಷಯದ ಬಗ್ಗೆ ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡುವಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ವಿನಂತಿಸುತ್ತೇವೆ. ಕನಿಷ್ಠ 10 ದಿನಗಳು ಕಾಲಾವಕಾಶ ಕೊಡಲು ಮತ್ತು ನಿಮ್ಮ ವ್ಯಾಪ್ತಿಯಲ್ಲಿ ಇದುವರೆಗೆ ಮಾಡಿದಂತೆ ಸಾರ್ವಜನಿಕ ಅಹವಾಲು ಸಭೆ ಕರೆಯಬೇಕೆಂದು ಪರಿಸರಕ್ಕಾಗಿ ನಾವು ಸಂಘಟನೆಯ ಎ.ಟಿ.ರಾಮಸ್ವಾಮಿ, ಪರಶುರಾಮೇಗೌಡ, ಆಂಜನೇಯರೆಡ್ಡಿ, ಎ.ಎಸ್. ಕವಿತಾ, ಪಾರ್ವತಿ ಶ್ರೀರಾಮ್, ಲೀಲಾವೆಂಕಟೇಶ್, ಭಾಗ್ಯ ಶಂಕರ್, ಅಂಜನಾ, ಪ್ರಭಾ ನಂದೀಶ್, ಗಾಯಿತ್ರಿ, ಮಧುಶ್ರೀ, ಕುಸುಮಾ ಆಯರಹಳ್ಳಿ, ಭಾನುಮೋಹನ್ ಇನ್ನಿತರರು ಮನವಿ ಮಾಡಿದರು.

---

ಮೊದಲ ಪುಟದಿಂದ

### ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಡಲ್ಲ: ಬ್ಯಾನರ್ಜಿ ಪಟ್ಟು!

ಇದು ಪ್ರಜಾಪ್ರಭುತ್ವದ ಕೊಲೆ ಎಂದು ಆರೋಪಿಸಿದರು. ಮತದಾರರ ಪಟ್ಟಿ ಪರಿಷ್ಕರಣೆ ಸಮಯದಲ್ಲಿ ಸುಮಾರು 90 ಲಕ್ಷ ಹೆಸರುಗಳನ್ನು ಅಳಿಸಲಾಗಿದೆ. ಕೇಂದ್ರ ಪಡೆಗಳು ಟಿಎಂಸಿ ಏಜೆಂಟ್‌ಗಳು ಮತ್ತು ಅಭ್ಯರ್ಥಿಗಳನ್ನು ಬಹು ಜಿಲ್ಲೆಗಳಲ್ಲಿ ಗುರಿಯಾಗಿಸಿಕೊಂಡಿವೆ. ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿದರು.

### ತಿದ್ದುಪಡಿ ಮತಪತ್ರಗಳ ಫಾರೆನ್ಸಿಕ್ ಪರೀಕ್ಷೆ ಅಗತ್ಯ

ನಿಷ್ಪಕ್ಷಪಾತವಾಗಿ ತನಿಖೆ ನಡೆಯಬೇಕು. ಬಿಜೆಪಿಯವರು ಮತ ಕಳವು ಮಾಡಿದ್ದಾರೆ. ಚುನಾವಣಾ ಆಯೋಗ ಕೂಡ ನ್ಯಾಯ, ಮುಕ್ತ ಸಮ್ಮತವಾಗಿ ನಡೆಸಬೇಕು ಎಂದು ಆಗ್ರಹಿಸಿದರು. ಸಿ.ಎಂ ಭೇಟಿ: ಸಿದ್ದರಾಮಯ್ಯ ಅವರನ್ನು ಟಿ.ಡಿ ರಾಜೇಗೌಡ ಭೇಟಿ ಮಾಡಿ ಚರ್ಚೆ ನಡೆಸಿದರು. ಮುಂದೇನು ಮಾಡಬೇಕೆಂಬ ಕುರಿತು ಸಮಾಲೋಚನೆ ನಡೆಸಿದರು.

### ಬೌರಿಂಗ್ ಗೋಡೆ ಕುಸಿತ ಪ್ರಕರಣ: 'ಲೋಕಾ' ತನಿಖಾ ತಂಡ ರಚನೆ

ವಿಚಾರಣೆ ಮಾಡಬೇಕೆಂದು ಚರ್ಚಿಸಲಾಗಿದೆ. ಒಂದು ಕಡೆ ಡಿಸಿ ನೇತೃತ್ವದಲ್ಲಿ ತನಿಖೆ, ಮತ್ತೊಂದು ಕಡೆ ಇಂಜನಿಯರ್ ಗಳ ತಂಡ ಹಾಗೂ ಲೋಕಾಯುಕ್ತದಿಂದ ತನಿಖೆ ನಡೆಯಲಿದೆ.

### ಒಂದೇ ಓಟ್‌ನಿಂದ ಸೋತ ಸಚಿವ

ವಿಜೇತರೆಂದು ಘೋಷಿಸಲಾಯಿತು. ಹಾಲಿ ಸಚಿವರ ಸೋಲು ನಟ ವಿಜಯ್ ಅವರ ಟಿವಿಕೆ ಪಕ್ಷವು ಐತಿಹಾಸಿಕ ಚೊಚ್ಚಲ ಚುನಾವಣೆಯಲ್ಲಿ 108 ಸ್ಥಾನಗಳೊಂದಿಗೆ ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ.

### ತಮಿಳುನಾಡಿನಲ್ಲಿ ಅಚ್ಚರಿ ಕೇರಳದಲ್ಲಿ ನಿರೀಕ್ಷಿತ: ಸಿಎಂ

ಈ ಬಾರಿ ಸ್ವಲ್ಪ ಎಸ್‌ಡಿಪಿಐಗೆ ವೋಟ್ ಹಾಕಿದ್ದಾರೆ. ಎಲ್ಲಿ ಕಡಿಮೆ ಆಗಿದೆ ಅಂತ ಪಕ್ಷ ತನಿಖೆ ಮಾಡುತ್ತದೆ. ಈಗ ಚುನಾವಣೆ ವಿರೋಧಿ ಚಟುವಟಿಕೆ ಹಿನ್ನೆಲೆ ಕೆಪಿಸಿಸಿ ತಗೊಂಡಿರುವ ಕ್ರಮ ಸರಿ ಇದೆ ಎಂದು ತಿಳಿಸಿದರು.

### ಹರಿಹರ ಪಂಚಮಸಾಲಿ ಪೀಠದಲ್ಲಿ ನಿಷೇಧಾಜ್ಞೆ ಜಾರಿ

ಅಭಿಯಾನ ಹಮ್ಮಿಕೊಂಡಿದ್ದರು. ಏ.27 ರಂದು ಟ್ರಸ್ಟಿಗಳು ಸುಳ್ಳು ಲೆಕ್ಕ ನೀಡಿದ್ದಾರೆ. ಪಾರದರ್ಶಕ ಲೆಕ್ಕ ಮಂಡನೆ ಮಾಡಬೇಕು ಎಂದು ಆಗ್ರಹಿಸಲು ಮುಂದಾಗಿದ್ದರು. ನಿಷೇಧಾಜ್ಞೆ ನಡುವೆಯೂ ಸಭೆ ನಡೆಸಲು ಸ್ವಾಮೀಜಿ ಬೆಂಬಲಿಗರು ಯತ್ನಿಸಿದರು.

### ಓಟ್ ಚೋರಿ ಅಲ್ಲ; ಡಕಾಯಿತಿ

\ರಿಟರ್ನಿಂಗ್ ಆಫೀಸರ್ ಕೋರ್ಟ್‌ಗೆ ಕೊಡಬೇಕಿತ್ತು. ಅದನ್ನು ಬಿಟ್ಟು ನೇರವಾಗಿ ಫಲಿತಾಂಶ ಘೋಷಣೆ ಮಾಡಿದ್ದಾರೆ ಎಂದು ಟೀಕಿಸಿದರು. ರಾಜೇ ಗೌಡಗೆ ಬಂದಿರುವ ಮತಗಳು ಮಾತ್ರ ಅಮಾನ್ಯವಾಗಿವೆ. ಜೀವರಾಜ್ ಗೆ ಬಂದಿ ರುವ ಮತಗಳು ಯಾಕೆ ಅಮಾನ್ಯ ಆಗಿಲ್ಲ? ಚಿಲುಮೆ ಎಂಬ ಸಂಸ್ಥೆ ಮೂಲಕ ಬಿಜೆಪಿ ಯವರು ಮತದಾರರ ಪಟ್ಟಿಯನ್ನೇ ತಿದ್ದುಪಡಿ ಮಾಡಿದ್ದರು. ಆಳಂದದಲ್ಲಿ ನೈಜ ಮತದಾರರನ್ನು ಕೈಬಿಟ್ಟಿದ್ದರು. ಬಿಜೆಪಿಯವರು ಮೊದಲಿನಿಂದಲೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲದವರು ಎಂದು ಸಿಎಂ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

### ಸಮಯಕ್ಕೆ ತಕ್ಕಂತೆ ಸಿಎಂ ಸುಳ್ಳು: ವಿ.ಸೋಮಣ್ಣ ಕಿಡಿ

ಕೂರಿಸುತ್ತಾರೆ ಎಂದು ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ಗೆಲುವು ಚುನಾವಣಾ ಆಯೋಗದ ಗೆಲುವು ಎಂಬ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಕಿಡಿಕಾರಿದರು.


ಖರ್ಗೆ ಅವರು ಜಾಣ ಕುರುಡರಂತೆ ಮಾತನಾಡಬಾರದು. ಮಹಿಳಾ ಮೀಸಲಾತಿ ತಿರಸ್ಕಾರ ಮಾಡಿದ ಪರಿಣಾಮ ಮಹಿಳೆಯರು ಅವರಿಗೆ ಗೂಸಾ ಕೊಟ್ಟಿದ್ದಾರೆ ಎಂದು ಹೇಳಿದರು.

### ಜೀವರಾಜ್ ವಿರುದ್ಧ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ತಡೆ

ದಾಖಲೆ ಸೃಷ್ಟಿ), 471 (ಸುಳ್ಳು ದಾಖಲೆಗಳನ್ನು ಅಸಲಿ ಎಂದು ಬಿಂಬಿಸುವುದು), 120ಬಿ (ಪಿತೂರಿ), ಮತ್ತು 149 (ಸಮಾನ ಉದ್ದೇಶ) ಜೊತೆಗೆ ಪ್ರಜಾಪ್ರತಿನಿಧಿ ಕಾಯ್ದೆ 1951ರ ಕಲಂ 136ರ (ಚುನಾವಣಾ ಅಕ್ರಮ) ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

# ಮಂಡ್ಯ ವಿವಿ ಪ್ರಭಾರ ಕುಲಪತಿ ನೇಮಕ ಕಾನೂನುಬಾಹಿರ: ಸಮಗ್ರ ತನಿಖೆಗೆ ಆಗ್ರಹ

**ಮಂಡ್ಯ:** ಮಂಡ್ಯ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಗಳ ನೇಮಕ ಕಾನೂನುಬಾಹಿರವಾಗಿದ್ದು, ಅವರನ್ನು ವಜಾಗೊಳಿಸಿ ವಿಶ್ವವಿದ್ಯಾಲಯದಲ್ಲಿ ನಡೆದಿರುವ ಭ್ರಷ್ಟಾಚಾರ ಸಂಬಂಧ ಸಮಗ್ರ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ವಿಧಾನ ಪರಿಷತ್ ಮಾಜಿ ಸಭಾಪತಿ ಮರಿತಿಬ್ಬೇಗೌಡ ಆಗ್ರಹಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯ ಬಾಲಕರ ಮಹಾವಿದ್ಯಾಲಯದಲ್ಲಿ ವಿಶ್ವವಿದ್ಯಾಲಯ ಆರಂಭಗೊಂಡು ಏಳು ವರ್ಷಗಳಾದರೂ ಸಮರ್ಪಕ ಅಭಿವೃದ್ಧಿ ಕಾಣಿಸಿಲ್ಲ. ಆರಂಭಗೊಂಡ ದಿನದಿಂದಲೇ ಮೈಸೂರು ವಿಶ್ವವಿದ್ಯಾಲಯದ ಎಲ್ಲಾ ಹಕ್ಕುಗಳನ್ನು ಕಳೆದುಕೊಂಡಿದೆ ಎಂದು ದೂರಿದರು.

ಯುಜಿಸಿ ನಿಯಮಾನುಸಾರ ಮಂಡ್ಯ ವಿಶ್ವವಿದ್ಯಾಲಯವು ತನ್ನದೇ ಆದ ಶಾಸನಗಳನ್ನು ರೂಪಿಸದೇ, ರಾಜ್ಯಪಾಲರು ಹಾಗೂ ರಾಜ್ಯ ಸರ್ಕಾರದಿಂದ ಅವುಗಳಿಗೆ ಅನುಮೋದನೆ ಪಡೆಯದೇ ಕಾರ್ಯನಿರ್ವಹಿಸುತ್ತಿದೆ. ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಚಟುವಟಿಕೆಗಳಲ್ಲಿಯೂ ಸಮರ್ಪಕತೆ ಇಲ್ಲ ಎಂದು ಆರೋಪಿಸಿದರು.

ಈ ಹಿನ್ನೆಲೆಯಲ್ಲಿ, ವಿವಿಯಿಂದ ನೀಡುವ ಪದವಿಗಳ ಮಾನ್ಯತೆ ಪ್ರಶ್ನಾರ್ಥಕವಾಗಿದೆ. ಸಂಯೋಜಿತ ಕಾಲೇಜುಗಳಲ್ಲಿ ಹೊಸ ಕೋರ್ಸ್‌ಗಳಿಗೆ ಅನುಮತಿ ನೀಡುವುದು, ಸಂಶೋಧನಾ ಕೇಂದ್ರ ಸ್ಥಾಪನೆ, ಪಿಎಚ್‌ಡಿ ಪ್ರವೇಶ ಪರೀಕ್ಷೆ ನಡೆಸುವುದು ಸೇರಿದಂತೆ ಹಲವು ಕಾರ್ಯಗಳು ಕಾನೂನುಬಾಹಿರವಾಗಿವೆ ಎಂದು ತಿಳಿಸಿದರು.

ಪ್ರಭಾರ ಕುಲಪತಿಗಳ ನೇಮಕದಲ್ಲೂ ನಿಯಮ ಉಲ್ಲಂಘನೆಯಾಗಿದ್ದು, ಸೇವಾ ಜೇಷ್ಠತೆಯಲ್ಲಿ ಮೊದಲಿಗರಾದ ಡಾ.ಎಚ್.ಆರ್.ಉಮಾ ಅವರನ್ನು ಕಡೆಗಣಿಸಿ, ಪ್ರೊ.ಶಿವಚಿತ್ತಪ್ಪ ಅವರ ಹೆಸರನ್ನು ಪ್ರೊ.ಪುಟ್ಟರಾಜು ಶಿಫಾರಸು ಮಾಡಿರುವುದು ನಿಯಮಬಾಹಿರವೆಂದು ಹೇಳಿದರು.

ಈ ಕುರಿತು ಉನ್ನತ ಶಿಕ್ಷಣ ಸಚಿವರು ಹಾಗೂ ಅಧಿಕಾರಿಗಳಿಗೆ ಆರು ಬಾರಿ ಪತ್ರ ಬರೆದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಸ್ವಂತ ಶಾಸನಗಳೇ ಇಲ್ಲದ ವಿವಿಯ ಪ್ರವೇಶ ದ್ವಾರಕ್ಕೆ 3 ಕೋಟಿ ರೂ. ವೆಚ್ಚ ಮಾಡಿರುವುದೇ ಸಂಶಯಾಸ್ಪದವೆಂದು ಪ್ರಶ್ನಿಸಿದರು.

ಪ್ರೊ.ಶಿವಚಿತ್ತಪ್ಪ ಅಧಿಕಾರ ವಹಿಸಿಕೊಂಡ ಬಳಿಕ, ಇನ್ನೂ ಆರಂಭವಾಗದ ಎಂಬಿಎ ಮತ್ತು ಎಂಸಿಎ ಕೋರ್ಸ್‌ಗಳಿಗಾಗಿ ಗ್ರಂಥಾಲಯಕ್ಕೆ 22 ಲಕ್ಷ ರೂ. ಮೌಲ್ಯದ ಪುಸ್ತಕಗಳನ್ನು ಖರೀದಿ ಮಾಡಲಾಗಿದೆ. ಘಟಕ ಕಾಲೇಜಿನ ಗ್ರಂಥಾಲಯಕ್ಕೆ 40 ಲಕ್ಷ ರೂ. ವೆಚ್ಚ ಮಾಡಲಾಗಿದೆ. ಕಂಪ್ಯೂಟರ್‌ಗಳನ್ನು ಖರೀದಿ ಮಾಡದೇ ಅದರ ಪರಿಕರಗಳಿಗೆ ಲಕ್ಷಾಂತರ ರೂ. ಖರ್ಚು ಮಾಡಿರುವುದನ್ನೂ ಅವರು ಟೀಕಿಸಿದರು.

ಇದೇ ರೀತಿ, ಹಿಂದಿನ ಅವಧಿಯಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಪೀಠೋಪಕರಣಗಳನ್ನು ಖರೀದಿ ಮಾಡಿದ್ದರೂ ಮತ್ತಷ್ಟು ಪೀಠೋಪಕರಣಗಳನ್ನು ಖರೀದಿ ಮಾಡಿ ಕೊಠಡಿಗಳಲ್ಲಿ ಸಂಗ್ರಹಿಸಿರುವುದಾಗಿ ಆರೋಪಿಸಿದರು.

ಕಾಲೇಜಿನ ಕಾವಲುಗಾರರು ಮತ್ತು ಇತರೆ ಸಿಬ್ಬಂದಿಯನ್ನು ನಿಯಮಬಾಹಿರವಾಗಿ ನೇಮಕ ಮಾಡಲಾಗಿದ್ದು, 20 ಮಂದಿ ಕೆಲಸ ಮಾಡುತ್ತಿದ್ದರೂ 50 ಮಂದಿಯ ಹೆಸರಿನಲ್ಲಿ ವೇತನ ನೀಡಲಾಗುತ್ತಿದೆ ಎಂದು ಗಂಭೀರ ಆರೋಪ ಮಾಡಿದರು. ಮೈಸೂರು ವಿಶ್ವವಿದ್ಯಾಲಯದಿಂದ 7 ಮಂದಿ ಅತಿಥಿ ಉಪನ್ಯಾಸಕರನ್ನು ಕರೆಸಿ ಕೆಲಸ ನೀಡದೇ ಇಟ್ಟುಕೊಂಡಿದ್ದಾರೆ. ಶಿಕ್ಷಕರ ವೇತನವನ್ನು ಸರ್ಕಾರವೇ ನೀಡುತ್ತಿರುವ ಸಂದರ್ಭದಲ್ಲಿ, ಮಂಡ್ಯ ವಿವಿ ಲಾಭದಾಯಕವಾಗಿ ನಡೆಯುತ್ತಿದೆ ಎಂಬ ಹೇಳಿಕೆ ಹಾಸ್ಯಾಸ್ಪದವೆಂದು ವ್ಯಂಗ್ಯವಾಡಿದರು.

ಪಿಎಚ್‌ಡಿ ಪ್ರವೇಶ ಪರೀಕ್ಷೆಯಲ್ಲೂ ನಿಯಮ ಉಲ್ಲಂಘನೆ ನಡೆದಿದ್ದು, ಅರ್ಹತೆ ಇಲ್ಲದಿದ್ದರೂ ಪರೀಕ್ಷೆ ನಡೆಸಿ ಶೇಕಡಾ 95 ಫಲಿತಾಂಶ ಪ್ರಕಟಿಸಲಾಗಿದೆ. 186 ಪರೀಕ್ಷಾರ್ಥಿಗಳಲ್ಲಿ 136 ಮಂದಿ ತುಮಕೂರು, ಚಿತ್ರದುರ್ಗ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳವರಾಗಿದ್ದು, ಅವರಿಂದ ಲಕ್ಷಾಂತರ ರೂಪಾಯಿ ಸಂಗ್ರಹಿಸಲಾಗಿದೆ ಎಂದು ಆರೋಪಿಸಿದರು. ಈ ಸಂಬಂಧ ರಾಜ್ಯಪಾಲರು ಮತ್ತು ರಾಜ್ಯ ಸರ್ಕಾರ ತಕ್ಷಣವೇ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಲೋಕಾಯುಕ್ತ ಮೊರೆ ಹೋಗುವುದಾಗಲಿ ಅಥವಾ ಕಾನೂನು ಹೋರಾಟ ನಡೆಸುವುದಾಗಲಿ ಮಾಡುವುದಾಗಿ ಮರಿತಿಬ್ಬೇಗೌಡ ಎಚ್ಚರಿಸಿದರು.

# ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆಯಾಗಲಿ: ಡೀಸಿ
## ಗ್ಯಾರೇಜ್, ಹೋಟೆಲ್‌ನಲ್ಲಿ ಕೆಲಸ ಮಾಡಿದ್ರೆ ಕ್ರಮ



**ಮಂಡ್ಯ:** ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವ ಮಕ್ಕಳನ್ನು ಪತ್ತೆಹಚ್ಚಿ ಅವರಿಗೆ ಕಡ್ಡಾಯವಾಗಿ ಶಿಕ್ಷಣ ಕಲ್ಪಿಸುವುದು ಅತ್ಯಂತ ಮುಖ್ಯ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ–1986 ಹಾಗೂ 2017ರ ನಿಯಮಗಳ ಕುರಿತ ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿ ಮತ್ತು ಕಾರ್ಯಪಡೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

14 ವರ್ಷದೊಳಗಿನ ಮಕ್ಕಳು ಗ್ಯಾರೇಜ್, ಹೋಟೆಲ್, ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವುದು ಕಂಡುಬಂದರೆ ತಕ್ಷಣ ಪತ್ತೆಹಚ್ಚಿ ಸಂಬಂಧಿತ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲೆಯಲ್ಲಿ ಎಲ್ಲಾ ಶಾಲೆಗಳಿಗೆ ಅಧಿಕಾರಿಗಳು ಭೇಟಿ ನೀಡಿ, ನಿರಂತರವಾಗಿ ಗೈರುಹಾಜರಾಗುತ್ತಿರುವ ಮಕ್ಕಳ ಪೋಷಕರನ್ನು ಸಂಪರ್ಕಿಸಿ ಮಾಹಿತಿ ಸಂಗ್ರಹಿಸಬೇಕು ಎಂದರು.

ಏಪ್ರಿಲ್ 2025ರಿಂದ ಮಾರ್ಚ್ 2026ರವರೆಗೆ ಜಿಲ್ಲೆಯಲ್ಲಿ 951 ತಪಾಸಣೆಗಳನ್ನು ನಡೆಸಲಾಗಿದ್ದು, 40 ಕಿಶೋರ ಕಾರ್ಮಿಕರನ್ನು ಪತ್ತೆಹಚ್ಚಲಾಗಿದೆ. ಈ ಪೈಕಿ 14 ಪ್ರಕರಣಗಳು ಅಪರಾಧ ದಾಖಲಾಗಿ, 26 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿವೆ ಎಂದು ತಿಳಿಸಿದರು. ತಾಲ್ಲೂಕು ಮಟ್ಟದಲ್ಲಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಕಿಶೋರ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವ ಮಕ್ಕಳನ್ನು ಗುರುತಿಸಿ ಅವರಿಗೆ ಸಮಾಲೋಚನೆ ನೀಡಿ ಶಿಕ್ಷಣದೊಂದಿಗೆ ಕೌಶಲ್ಯ ತರಬೇತಿಯನ್ನು ಒದಗಿಸಬೇಕು ಎಂದು ಸೂಚಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ಆನಂದ ಎಂ ಮಾತನಾಡಿ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಸಮಿತಿ ಸಭೆಗಳನ್ನು ನಡೆಸಬೇಕು. ಜೊತೆಗೆ ಬಾಲಕಾರ್ಮಿಕ, ಕಿಶೋರ ಕಾರ್ಮಿಕ ಹಾಗೂ ಬಾಲ್ಯ ವಿವಾಹ ವಿರುದ್ಧ ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಹೇಳಿದರು. 2025–26ನೇ ಸಾಲಿನಲ್ಲಿ ಬಾಲಕಾರ್ಮಿಕ ನಿರ್ಮೂಲನೆಗಾಗಿ ಜಿಲ್ಲೆಯಲ್ಲಿ 9 ಬೀದಿ ನಾಟಕಗಳು, 7,000 ಕರಪತ್ರಗಳ ವಿತರಣೆ, 22 ಗೋಡೆ ಬರಹಗಳು ಹಾಗೂ 6 ಗ್ರಾಮ ಪಂಚಾಯಿತಿಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಲಾಯಿತು.

ಸಭೆಯಲ್ಲಿ ಅಪರ ಪೊಲೀಸ್ ಅಧೀಕ್ಷಕ ತಿಮ್ಮಯ್ಯ, ಕಾರ್ಮಿಕ ಇಲಾಖೆ ಅಧಿಕಾರಿ ಡಾ.ಸವಿತಾ, ಯೋಜನಾ ನಿರ್ದೇಶಕ ಪ್ರಭಾಕರ್, ರಾಜ್ಯ ಸಂಚಾಲಕ ಬಿನು ವರ್ಗೀಸ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಶ್ರೀನಿವಾಸ್, ಹಿಂದುಳಿದ ವರ್ಗಗಳ ಇಲಾಖೆಯ ಉಪನಿರ್ದೇಶಕಿ ಮಂಜುಳಾ, ಆರೋಗ್ಯ ಇಲಾಖೆಯ ಸರ್ವೇಕ್ಷಣಾಧಿಕಾರಿ ಡಾ.ಕುಮಾರ್, ನಗರಸಭೆಯ ಪರಿಸರ ಅಭಿಯಂತರ ರುದ್ರಗೌಡ, ಡಿ.ಡಿ.ಪಿ. ಲೋಕೇಶ್ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಆಶಾ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು.

# ಅಟ್ರಾಸಿಟಿ ಸಂತ್ರಸ್ತರ ಹಣ ಲಪಟಾಯಿಸಿದ ಆರೋಪ: ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

**ಮಂಡ್ಯ:** ಅಟ್ರಾಸಿಟಿ ಪ್ರಕರಣದ ಸಂತ್ರಸ್ತರಿಂದ ಪರಿಹಾರದ ಹಣ ಲಪಟಾಯಿಸಿರುವ ಆರೋಪದ ಹಿನ್ನೆಲೆ, ಜಿಲ್ಲಾ ಎಸ್ಸಿ/ಎಸ್ಟಿ ಜಾಗೃತಿ ಉಸ್ತುವಾರಿ ಸಮಿತಿ ಸದಸ್ಯ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಎಫ್‌ಡಿಎ ಅಧಿಕಾರಿಯ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳುವಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ವಿಭಾಗೀಯ ಸಂಚಾಲಕ ಶಿವರಾಜ್ ಮರಳಿಗ ಒತ್ತಾಯಿಸಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮದ್ದೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಾಖಲಾಗಿದ್ದ ಎಸ್ಸಿ/ಎಸ್ಟಿ ದೌರ್ಜನ್ಯ ಪ್ರಕರಣದಲ್ಲಿ ಸಂತ್ರಸ್ತರಿಗೆ ಸರ್ಕಾರದಿಂದ ಸಿಗಬೇಕಾದ ಪರಿಹಾರದ ಹಣವನ್ನು ದೋಚಲು ಸಂಚು ರೂಪಿಸಲಾಗಿದೆ ಎಂದು ಆರೋಪಿಸಿದರು. ಈ ಸಂಚಿನಲ್ಲಿ ಜಿಲ್ಲಾ ಎಸ್ಸಿ/ಎಸ್ಟಿ ಜಾಗೃತಿ ಉಸ್ತುವಾರಿ ಸಮಿತಿ ಸದಸ್ಯ ಬಿ. ಆನಂದ ಹಾಗೂ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರ ಕಚೇರಿಯ ಎಫ್‌ಡಿಎ ಅಧಿಕಾರಿ ನವೀನ್ ಭಾಗಿಯಾಗಿದ್ದಾರೆ ಎಂದು ಹೇಳಿದರು.

ಈ ಸಂಬಂಧ ಬಿ. ಆನಂದ ಹಾಗೂ ಸಂತ್ರಸ್ತರ ನಡುವಿನ ಸಂಭಾಷಣೆಯ ದಾಖಲೆಗಳನ್ನು ಸಂಗ್ರಹಿಸಲಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ದೂರು ನೀಡಲಾಗಿದ್ದು, ಬಿ. ಆನಂದ ಅವರನ್ನು ಸಮಿತಿ ಸದಸ್ಯ ಸ್ಥಾನದಿಂದ ಕೈಬಿಡಬೇಕು ಹಾಗೂ ಎಫ್‌ಡಿಎ ಅಧಿಕಾರಿ ನವೀನ್ ಅವರನ್ನು ಸೇವೆಯಿಂದ ಅಮಾನತು ಮಾಡಿ ಸಂಪೂರ್ಣ ವಿಚಾರಣೆ ನಡೆಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಎಸ್.ಪಿ. ಅಂದಾನಯ್ಯ, ಎಂ. ಕುಮಾರ ಮತ್ತು ವಿ. ಸಂತೋಷ್ ಉಪಸ್ಥಿತರಿದ್ದರು.

# ಎಲೆಮುದ್ದನಹಳ್ಳಿ ವಿರಕ್ತ ಮಠಕ್ಕೆ ಉತ್ತರಾಧಿಕಾರಿ ನೇಮಕ

**ಕೆ.ಆರ್.ನಗರ:** ತಾಲೂಕಿನ ಎಲೆ ಮುದ್ದನಹಳ್ಳಿಯ ಶ್ರೀವಿರಕ್ತ ಮಠದ ನೂತನ ಉತ್ತರಾಧಿಕಾರಿಯಾಗಿ ಶ್ರೀಮೃತ್ಯುಂಜಯ ಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ.



ಮಠದ ಆವರಣದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ತೊರೆನೂರಿನ ಶ್ರೀ ಮರುಳಸಿದ್ದೇಶ್ವರ ವಿರಕ್ತ ಮಠದ ಪೀಠಾಧ್ಯಕ್ಷ ಶ್ರೀ ಮಲ್ಲೇಶ ಸ್ವಾಮಿ ಅವರ ಸಾನ್ನಿಧ್ಯದಲ್ಲಿ ಈ ಘೋಷಣೆ ಮಾಡಲಾಯಿತು.

ನಂಜನಗೂಡು ತಾಲೂಕಿನ ಕಣೆನೂರು ಗ್ರಾಮದ ನಿವಾಸಿಗಳಾದ ಪೂರ್ಣಿಮಾ ಮತ್ತು ಸರ್ವೇಶ್ ಮೂರ್ತಿ ಅವರ ಪುತ್ರರಾದ ಶ್ರೀಮೃತ್ಯುಂಜಯ ಸ್ವಾಮಿ ಅವರನ್ನು ವಿಧಿವಿಧಾನಗಳೊಂದಿಗೆ ಉತ್ತರಾಧಿಕಾರಿಯಾಗಿ ಘೋಷಿಸ ಲಾಯಿತು. ಈ ಸಂದರ್ಭದಲ್ಲಿ ಸರಗೂರು ಪಡುವಲ ವಿರಕ್ತ ಮಠದ ಶ್ರೀ ಮಹದೇವ ಸ್ವಾಮೀಜಿ, ಹೆಚ್.ಡಿ.ಕೋಟೆ ತಾಲೂಕಿನ ಪುರದ ಶ್ರೀ ಬಸವೇಶ್ವರ ಪಟ್ಟದ ಮಠದ ಶ್ರೀಚಂದ್ರಶೇಖರ ಸ್ವಾಮೀಜಿ, ಕರ್ಪೂರವಳ್ಳಿ ಜಂಗಮ ಮಠದ ಶ್ರೀ ಅಭಿನವ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ ಹಲವು ಮಠಾಧೀಶರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಶಾಸಕ ಡಿ.ರವಿಶಂಕರ್, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್ ಕುಮಾರ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಕಾಲ ಭೈರವೇಶ್ವರ, ಆಂಜನೇಯ ಪವರ್ ಫುಲ್ ದೇವರು: ನಿರ್ಮಲಾನಂದನಾಥ ಶ್ರೀ

**ಮಂಡ್ಯ:** ಸತ್ಯ ಧರ್ಮ ಮಾರ್ಗದಲ್ಲಿ ನಡೆದರೆ ಮನುಷ್ಯನಿಗೆ ಶಾಂತಿ ನೆಮ್ಮದಿ ದೊರೆಯುತ್ತದೆ ಆಧ್ಯಾತ್ಮಿಕತೆ ಮರೆತರೆ ಬೇರಿಲ್ಲದ ಮರದಂತೆ ಜೀವನ ಆಗುತ್ತದೆ ಈ ಬಗ್ಗೆ ಎಲ್ಲರೂ ಚಿಂತಿಸುವ ಅಗತ್ಯವಿದೆ ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.



ತಾಲೂಕಿನ ಕೊತ್ತತ್ತಿ ಹೋಬಳಿ ಕ್ಯಾತುಂಗೆರೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಭೈರವೇಶ್ವರ ದೇವಾಲಯ ಪ್ರತಿಷ್ಠಾಪನೆ ಹಾಗೂ ಮಹಾ ಕುಂಭಾಭಿಷೇಕ ಮಹೋತ್ಸವದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಊರಿನ ದೈವ ಶ್ರೀಭೈರವೇಶ್ವರ ಸ್ವಾಮಿಗೆ ದೇವಾಲಯ ಕಟ್ಟಿದ್ದೀರಿ ದೇವರು ಕೂಡ ನಮಗಾಗಿ ಇರುತ್ತಾನೆಯೇ ಹೊರತು ದೇವರೇ ಬಂದು ಭಕ್ತರಲ್ಲಿ ದೇವಾಲಯ ನಿರ್ಮಿಸಿಕೊಡಿ ಎಂದು ಕೇಳುವುದಿಲ್ಲ.ನಮ್ಮ ಪ್ರತಿ ಕಾರ್ಯದಲ್ಲೂ ಭಗವಂತ ಇರುತ್ತಾನೆ ಎಂದು ಉಸಿರಾಟದಂತೆ ಆತನ ಸ್ಮರಣೆ ಮಾಡುತ್ತಿದ್ದರೆ ಆತನ ಅನುಭೂತಿ ನಮಗಾಗುತ್ತದೆ ಎಂದು ತಿಳಿಸಿದರು.

ಆಧುನಿಕತೆ ಬೆಳೆದಂತೆ ವಿದ್ಯ ಜಾಸ್ತಿ ಆಗುತ್ತಿರುವ ದಿನಮಾನದ ಗಳಿಗೆಯಲ್ಲಿ ಹೇಳುವುದನ್ನು ಕೇಳುವ ಪರಿಸ್ಥಿತಿ ಯಾರಲ್ಲೂ ಇಲ್ಲ. ಹೇಳುವುದನ್ನು ಎಲ್ಲವನ್ನು ಅರ್ಥವಾಗಿ ವೈಜ್ಞಾನಿಕವಾಗಿ ಹೇಳಬೇಕು ಎಂದು ತಿಳಿಸಿದರು.

ಪೋಷಕರು ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿ, ಅದಕ್ಕಿಂತ ಮುಖ್ಯವಾಗಿ ಉತ್ತಮ ಸಂಸ್ಕಾರ ಕೊಡಿ, ಮನೆಯಲ್ಲಿ ಮಕ್ಕಳಿಗೆ ತಾಯಂದಿರು ಸಂಸ್ಕಾರಯುತ ವಾಗಿ ಬದುಕಲು ಹೇಳಿಕೊಡಿ ಎಂದು ತಿಳಿಸಿದರು. ದೇವರಿಗೆ ಗಂಡು–ಹೆಣ್ಣು ಭೇದ ಇಲ್ಲ.ಎಲ್ಲವನ್ನು ನೋಡುವ ಕಣ್ಣು ತನ್ನನ್ನು ತಾನು ನೋಡಿ ಕೊಳ್ಳುವುದಿಲ್ಲ. ಕಾಲ ಭೈರವೇಶ್ವರ ಮತ್ತು ಆಂಜನೇಯ ಪವರ್ ಫುಲ್ ದೇವರು. ಸ್ವಾಮಿ ನಮ್ಮ ಸುತ್ತ ಮುತ್ತ ಇರುವುದರಿಂದ ನಾವು ಎರಡು ದೇವರಿಗೆ ಹುಷಾರಾಗಿ ನಡೆದುಕೊಳ್ಳಬೇಕು. ಭಕ್ತಿಯಿಂದ ಪೂಜೆ ಮಾಡೋಣ ಎಂದು ತಿಳಿಸಿದರು.

ಕಾಯಿಲೆ ಬಂದಾಗ ವೈದ್ಯರ ಹತ್ತಿರ ಹೋಗುತ್ತೇವೋ ಅದೇ ರೀತಿ ದೇವರ ಹತ್ತಿರ ಹೋದಾಗ ಮನಸ್ಸಿನ ಕಾಯಿಲೆ ಏನು ಎಂದು ದೇವರಿಗೆ ಗೊತ್ತಾಗುತ್ತದೆ ಆಗ ದೇವರು ಅದಕ್ಕೆ ಪೂರಕವಾಗಿರುವ ರೀತಿಯಲ್ಲಿ ನಮಗೆ ಏನು ಔಷಧಿ ಬೇಕು ಅದನ್ನು ಇಂಜೆಕ್ಟ್ ಮಾಡಿ ಅವನೇ ಕೊಟ್ಟು ಕಳಿಸುತ್ತಾನೆ.ನಾವು ದೇವರ ಹತ್ತಿರ ಹೋದಾಗ ಏನು ಕೇಳಬೇಕು ಎಂದರೆ ಜಗತ್ತಿಗೆ ನಮ್ಮನ್ನು ಕರೆದು ಕೊಂಡು ಬಂದಿದ್ದೀಯಾ ನನಗೆ ಏನು ಬೇಕು ಎಂದು ನಿನಗೆ ಗೊತ್ತಿದೆ ಅದನ್ನಷ್ಟೇ ಕೊಟ್ಟು ನಮ್ಮನ್ನು ಕಾಪಾಡು ಎಂದು ಭಕ್ತಿಯಿಂದ ದೇವರನ್ನು ಕೇಳಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ಎಸ್.ಸಚ್ಚಿದಾನಂದ, ಗ್ರಾಮದ ಮುಖಂಡರಾದ ಯಜಮಾನ್ ಕೆ.ಟಿ.ಪುಟ್ಟಸ್ವಾಮಿ,ಕೆ.ಎಂ. ಬಸವರಾಜು, ಕೃಷ್ಣ,ಲೋಕೇಶ್,ಕೆ.ಕಿರಣ್, ಡಾ.ಕೆ.ಎಂ. ಶಿವಕುಮಾರ್, ಶಂಭೂನಹಳ್ಳಿ ಕೃಷ್ಣ,, ಕಾಳೇಗೌಡ, ಸಿದ್ದೇಗೌಡ, ಸೇರಿದಂತೆ ಮತ್ತಿತರರು ಹಾಜರಿದ್ದರು.

ಇದಕ್ಕೂ ಮುನ್ನ ಶ್ರೀ ನಿರ್ಮಲಾನಂದ ನಾಥ ಸ್ವಾಮೀಜಿ ಅವರನ್ನು ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು. ಶ್ರೀ ಕಾಲಭೈರವೇಶ್ವರ ದೇವಾಲಯದ ಉದ್ಘಾಟನೆ ಅಂಗವಾಗಿ ಭಕ್ತರಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು.

# ವಸ್ತುಗಳ ಮರುಬಳಕೆಗೆ ಸಾರ್ವಜನಿಕರು ಕೈಜೋಡಿಸಲಿ: ಸಚಿವ
## ನಾಗಮಂಗಲದಲ್ಲಿ ಮರುಬಳಕೆ ಕೇಂದ್ರಕ್ಕೆ ಚಾಲನೆ



**ನಾಗಮಂಗಲ:** ಮನೆಯಲ್ಲಿ ಅನಾವಶ್ಯಕವಾಗಿ ಉಳಿದಿರುವ ವಸ್ತುಗಳನ್ನು ಕಸದಂತೆ ತ್ಯಜಿಸುವುದಕ್ಕಿಂತ ಅವುಗಳನ್ನು ಮರುಬಳಕೆಗೆ ಒಪ್ಪಿಸಿ ಸಮಾಜಕ್ಕೆ ಉಪಯೋಗವಾಗುವಂತೆ ಮಾಡಬೇಕು ಎಂದು ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಸಾರ್ವಜನಿಕರಲ್ಲಿ ಕರೆ ನೀಡಿದರು.

ನಾಗಮಂಗಲ ಪುರಸಭೆ ವತಿಯಿಂದ ಶ್ರೀಸೌಮ್ಯಕೇಶವಸ್ವಾಮಿ ದೇವಸ್ಥಾನದ ಪಾರ್ಕ್‌ನಲ್ಲಿ ಸ್ಥಾಪಿಸಲಾದ ಮನೆ ಬಳಕೆ ವಸ್ತುಗಳ ಮರುಬಳಕೆ ಕೇಂದ್ರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನೆಗಳಲ್ಲಿ ಬಳಸಿದ ವಸ್ತುಗಳನ್ನು ಕಸದಂತೆ ಎಸೆಯುವುದರಿಂದ ಪರಿಸರ ಮಾಲಿನ್ಯ ಹೆಚ್ಚಾಗುತ್ತದೆ. ಆದರೆ ಅವುಗಳನ್ನು ಮರುಬಳಕೆ ಕೇಂದ್ರಕ್ಕೆ ಒಪ್ಪಿಸಿದರೆ ಅಗತ್ಯವಿರುವವರು ಬಳಸಿಕೊಳ್ಳಲು ಅವಕಾಶ ಸಿಗುತ್ತದೆ. ಇದರಿಂದ ಕಸದ ಪ್ರಮಾಣ ಕಡಿಮೆಯಾಗುವುದರ ಜೊತೆಗೆ ಸಂಪನ್ಮೂಲಗಳ ಸಮರ್ಪಕ ಬಳಕೆಗೆ ದಾರಿಯಾಗಿದೆ ಎಂದು ಹೇಳಿದರು.

ಪ್ರತಿ ಮನೆಯಲ್ಲಿ ಅನಾವಶ್ಯಕ ವಸ್ತುಗಳು ಇರುತ್ತವೆ. ಅವುಗಳನ್ನು ಇಲ್ಲಿ ತಂದು ಇಟ್ಟರೆ, ಅವು ಅಗತ್ಯವಿರುವವರ ಕೈಗೆ ತಲುಪುತ್ತವೆ. ಈ ಮೂಲಕ ಸಮಾಜದಲ್ಲಿ ಹಂಚಿಕೊಳ್ಳುವ ಮನೋಭಾವ ಬೆಳೆಸಲು ಸಾಧ್ಯವಾಗುತ್ತದೆ, ಎಂದು ಸಚಿವರು ತಿಳಿಸಿದರು.

ಮರುಬಳಕೆ ಕೇಂದ್ರವನ್ನು ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಬೇಕು. ಅಗತ್ಯವಿಲ್ಲದ ವಸ್ತುಗಳನ್ನು ತಂದು ಇಲ್ಲಿ ಇಡುವುದರ ಜೊತೆಗೆ, ಬೇಕಾದವರು ಅವನ್ನು ಪಡೆದು ಬಳಸಿಕೊಳ್ಳಬಹುದು ಎಂದು ಅವರು ಮನವಿ ಮಾಡಿದರು. ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸತೀಶ್ ಕುಮಾರ್, ಪುರಸಭೆಯ ಮುಖ್ಯಾಧಿಕಾರಿ ವೀಣಾ, ಮಾಜಿ ಪುರಸಭಾ ಸದಸ್ಯ ಅಶೋಕ್ ಹಾಗೂ ಸಮಾಜಸೇವಕ ದೇಶಪ್ರೇಮಿ ಶ್ರೀನಿವಾಸ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಪಕ್ಷದ ಗೌರವ ಕಾಪಾಡಿ ಕಾರ್ಯನಿರ್ವಹಿಸಿ: ಕೆ. ಮಹದೇವ ಎಚ್ಚರಿಕೆ

**ಪಿರಿಯಾಪಟ್ಟಣ:** ಪದಾಧಿಕಾರಿಗಳಾಗಿ ನೇಮಕಗೊಳ್ಳುವವರು ನಾಯಕತ್ವಕ್ಕೆ ಹಾಗೂ ಪಕ್ಷಕ್ಕೆ ಕಳಂಕ ತರದಂತೆ ಕಾರ್ಯನಿರ್ವಹಿಸಿ, ಪಕ್ಷದ ಗೌರವ ಉಳಿಸುವ ಜವಾಬ್ದಾರಿ ಹೊತ್ತು ಕೆಲಸ ಮಾಡಬೇಕು ಎಂದು ಮಾಜಿ ಶಾಸಕ ಕೆ. ಮಹದೇವ ತಿಳಿಸಿದರು.



ಪಟ್ಟಣದ ಮಂಜುನಾಥ ಸಮುದಾಯ ಭವನದಲ್ಲಿ ಜೆಡಿಎಸ್ ತಾಲ್ಲೂಕು ಘಟಕದ ಪದಾಧಿಕಾರಿಗಳ ನೇಮಕಾತಿ ಪತ್ರಗಳನ್ನು ಸೋಮವಾರ ವಿತರಿಸಿ ಅವರು ಮಾತನಾಡಿದರು. ಮುಂದಿನ ಎಲ್ಲಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಪಕ್ಷ ಸಂಘಟನೆ ಬಲಪಡಿಸುವ ಉದ್ದೇಶದಿಂದ ಪದಾಧಿಕಾರಿಗಳನ್ನು ನೇಮಕ ಮಾಡಲಾಗುತ್ತಿದೆ. ಸಂಘಟನೆಗೆ ನಿರ್ಲಕ್ಷ್ಯ ತೋರಿದವರನ್ನು ಯಾವುದೇ ಸಂಶಯವಿಲ್ಲದೆ ಸ್ಥಾನದಿಂದ ತೆಗೆದುಹಾಕಲಾಗುವುದು ಎಂದು ಎಚ್ಚರಿಸಿದರು.

ಇತ್ತೀಚೆಗೆ ನಡೆದ ಕಾರ್ಯಕ್ರಮಗಳಲ್ಲಿ ಸಚಿವ ಕೆ. ವೆಂಕಟೇಶ್ ತಮ್ಮ ಬಗ್ಗೆ ನಿರಾಧಾರ ಹಾಗೂ ಹಗುರ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಆರೋಪಿಸಿದ ಅವರು, ತಾಲ್ಲೂಕಿನಲ್ಲಿ ಎಚ್.ಎಂ. ಚನ್ನಬಸಪ್ಪ, ಕೆ.ಎಸ್. ಕಾಳಮರೀಗೌಡ, ಎಚ್.ಸಿ. ಬಸವರಾಜು ಮತ್ತು ತಮ್ಮ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದೇವೆ. ಆದರೆ ಎಲ್ಲ ಅಭಿವೃದ್ಧಿಯನ್ನೂ ತಾನೇ ಮಾಡಿದ್ದೇನೆ ಎಂಬ ಹೇಳಿಕೆ ಸಚಿವರಿಗೆ ಗೌರವ ತರುವುದಿಲ್ಲ ಎಂದು ಟೀಕಿಸಿದರು.

ತಮ್ಮ ಮಗನನ್ನು ರಾಜಕೀಯವಾಗಿ ಮುಂದಿರಿಸಲು ಮನಸ್ಸಿಗೆ ಬಂದಂತೆ ಹೇಳಿಕೆ ನೀಡುತ್ತಿರುವುದು ಸರಿಯಲ್ಲ. ಇದನ್ನು ಇನ್ನೂ ಸಹಿಸಿಕೊಳ್ಳಲು ಸಾಧ್ಯವಿಲ್ಲ; ಅಗತ್ಯವಿದ್ದರೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಲಾಗುವುದು ಎಂದು ಎಚ್ಚರಿಸಿದರು. ಉತ್ತಮ ರಾಜಕಾರಣಿಯಾಗಿದ್ದರೆ ನೇರವಾಗಿ ಎದುರಿಸಲಿ, ಅಸಭ್ಯ ಪದ ಬಳಕೆ ಸರಿಯಲ್ಲ ಎಂದು ಪ್ರಶ್ನಿಸಿದರು.

ತಮ್ಮ ಪರವಾಗಿ ಮತ್ತು ಪಕ್ಷದ ಪರವಾಗಿ ಕೆಲಸ ಮಾಡುವವರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಎಂದು ಆರೋಪಿಸಿದ ಅವರು, ತಮ್ಮ ಶಾಸಕತ್ವದ ಅವಧಿಯಲ್ಲಿ ಜಾರಿಗೆ ತಂದ 4600ಕ್ಕೂ ಹೆಚ್ಚು ವಿವಿಧ ಯೋಜನೆಗಳನ್ನು ರದ್ದುಪಡಿಸಲಾಗಿದೆ. ಸಾಗುವಳಿ ಚೀಟಿಗಳನ್ನು ರದ್ದುಪಡಿಸುವಂತೆ ಶಿಫಾರಸು ಮಾಡಿರುವುದು ದ್ವೇಷದ ರಾಜಕಾರಣದ ಉದಾಹರಣೆ ಎಂದು ಹೇಳಿದರು. ಇದಕ್ಕೆ ಕ್ಷೇತ್ರದ ಜನತೆ ತಕ್ಕ ಉತ್ತರ ನೀಡಲಿದ್ದಾರೆ ಎಂದರು.

ತಾಲ್ಲೂಕಿನ ರಾಗಿ ಖರೀದಿ ಕೇಂದ್ರಗಳಲ್ಲಿ ಕ್ವಿಂಟಲ್ಗೆ ನಾಲ್ಕು ಕೆಜಿ ಕಡಿಮೆ ಮಾಡಲಾಗುತ್ತಿದೆ ಎಂಬ ಆರೋಪವನ್ನೂ ಅವರು ಮಾಡಿದರು. ಇದು ಭ್ರಷ್ಟಾಚಾರದ ಸ್ಪಷ್ಟ ಉದಾಹರಣೆ. ಈ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲವೇ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಅಣ್ಣಯ್ಯ ಶೆಟ್ಟಿ ಅವರನ್ನು ಮುಂದುವರಿಸಲಾಯಿತು. ಪ್ರಧಾನ ಕಾರ್ಯದರ್ಶಿಯಾಗಿ ಎಂ.ಜೆ. ಸ್ವಾಮಿ, ಮಹಿಳಾ ಘಟಕದ ಅಧ್ಯಕ್ಷರಾಗಿ ಸುನೀತಾ ಮಂಜುನಾಥ್, ಉಪಾಧ್ಯಕ್ಷರಾಗಿ ಆಶಾ, ಕಾನೂನು ಘಟಕದ ಅಧ್ಯಕ್ಷರಾಗಿ ಜೆ.ಎಸ್. ನಾಗರಾಜ್, ಎಸ್ಟಿ ಘಟಕದ ಅಧ್ಯಕ್ಷರಾಗಿ ತಿಮ್ಮನಾಯಕ, ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ ರವಿ, ಕೋರ್ ಕಮಿಟಿ ಅಧ್ಯಕ್ಷರಾಗಿ ಎಚ್.ಡಿ. ರಾಜೇಂದ್ರ, ಓಬಿಸಿ ಘಟಕದ ಅಧ್ಯಕ್ಷರಾಗಿ ಡಿ.ಎ. ನಾಗೇಂದ್ರ ಸೇರಿದಂತೆ ಹಲವರನ್ನು ವಿವಿಧ ಹುದ್ದೆಗಳಿಗೆ ನೇಮಕ ಮಾಡಿ ನೇಮಕಾತಿ ಪತ್ರ ವಿತರಿಸಲಾಯಿತು.

ಕೆ. ರಮೇಶ್, ಗೋವಿಂದೇಗೌಡ, ರಾಜೇಗೌಡ ಸೇರಿದಂತೆ ಹಲವು ಮುಖಂಡರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಜಯಭೇರಿ

# ಚಾ.ನಗರದಲ್ಲಿ ಬಿಜೆಪಿ ವಿಜಯೋತ್ಸವ

**ಚಾಮರಾಜನಗರ:** ಪಂಚ ರಾಜ್ಯಗಳ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿ ಅಧಿಕಾರಕ್ಕೇರುವುತ್ತಿರುವ ಹಿನ್ನೆಲೆಯಲ್ಲಿ ನಗರದಲ್ಲಿ ಬಿಜೆಪಿ ವತಿಯಿಂದ ವಿಜಯೋತ್ಸವ ಆಚರಣೆ ಮಾಡಿ, ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.



ಐದು ರಾಜ್ಯಗಳ ಚುನಾವಣೆ ಫಲಿತಾಂಶ ಘೋಷಣೆಯಾಗುತ್ತಿದ್ದಂತೆ ಬಿಜೆಪಿ ಮುಖಂಡರು ಹಾಗು ಕಾರ್ಯಕರ್ತರು ನಗರದ ಶ್ರೀಚಾಮರಾಜೇಶ್ವರ ಉದ್ಯಾನವನ ಮುಂಭಾಗದಲ್ಲಿ ಜಮಾಯಿಸಿದರು. ಅಲ್ಲಿಂದ ಮೆರವಣಿಗೆಯಲ್ಲಿ ತೆರಳಿ ಭುವನೇಶ್ವರಿ ವೃತ್ತಕ್ಕೆ ತಲುಪಿದರು. ದಾರಿಯುತ್ತಕ್ಕೂ ಬಿಜೆಪಿ ಬಾವುಟಹಿಡಿದು, ಬಿಜೆಪಿ, ಪ್ರಧಾನಿ ನರೇಂದ್ರ ಮೋದಿ, ಅಮಿತಾ ಪರವಾದ ಘೋಷಣೆಗಳನ್ನು ಕೂಗಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಬೇಂದ್ರಪ್ಪ ಮಾತನಾಡಿ, ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸುವ ಮೂಲಕ ಬಿಜೆಪಿ ಅಧಿಕಾರ ಹಿಡಿದಿರುವುದು ತುಂಬಾ ಸಂತಸವಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜನಪರ ಆಡಳಿತ ಒಪ್ಪಿರುವ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಜನರು ಬಿಜೆಪಿಗೆ ಮತ ಹಾಕುವ ಮೂಲಕ ಅಧಿಕಾರಕ್ಕೆ ತಂದಿದ್ದಾರೆ. ಈ ಮೂರು ರಾಜ್ಯ ಫಲಿತಾಂಶ ಕರ್ನಾಟಕ ರಾಜ್ಯದ ಮುಂದಿನ ಚುನಾವಣೆಯ ದಿಕ್ಸೂಚಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.


ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷ ಸೂರ್ಯಕುಮಾರ್ ಮಾತನಾಡಿ, ದೇಶದ ಜನ ಹಿಂದುತ್ವ ಕಡೆ ಸಾಗುತ್ತಿದ್ದಾರೆ ಎನ್ನುವುದಕ್ಕೆ ಪಂಚ ರಾಜ್ಯಗಳ ಚುನಾವಣೆ ಫಲಿತಾಂಶ ಸಾಕ್ಷಿಯಾಗಿದೆ. ಪಶ್ಚಿಮ ಬಂಗಾಳ ದಲ್ಲಿ ಮಮತ ಬ್ಯಾನರ್ಜಿ ವಿರುದ್ಧ ಬಿಜೆಪಿಗೆ ದೊಡ್ಡ ಗೆಲುವು ಬಂದಿದೆ. ಅದೇ ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಅಧಿಕಾರ ಹಿಡಿದಿದೆ. ತಮಿಳುನಾಡಿನಲ್ಲಿ ಹಿಂದುತ್ವದ ವಿರುದ್ಧ ಇದ್ದ ಡಿಎಂಕೆಗೆ ಸೋಲಿನ ರುಚಿ ತೋರಿಸಿದ್ದಾರೆ. ದೇಶದ ಜನರು ಸುಭದ್ರ ಆಡಳಿತ, ರಕ್ಷಣೆಗೆ ಹೆಚ್ಚು ಒತ್ತು ನೀಡಿದ್ದಾರೆ ಎಂದರು.

ಚುಡಾ ಮಾಜಿ ಅಧ್ಯಕ್ಷ ಎಸ್. ಬಾಲಸುಬ್ರಮಣ್ಯ ಮಾತನಾಡಿ, ದೇಶದ ಸುಭದ್ರ ಹಾಗೂ ಹಿಂದು ರಾಷ್ಟ್ರವನ್ನಾಗಿಸುವ ಬಿಜೆಪಿ ಆಶಯಕ್ಕೆ ತಕ್ಕಂತೆ ಪಂಚ ರಾಜ್ಯ ಚುನಾವಣೆ ಫಲಿತಾಂಶ ಬಂದಿದೆ. ಪಶ್ಚಿಮ ಬಂಗಾಳದ ಮತದಾರರು 15 ವರ್ಷಗಳ ಮಮತಾ ಅವರ ಆಡಳಿತವನ್ನ ಕೊನೆಗಾಣಿಸಿದ್ದಾರೆ. ಹಿಂದು ವಿರೋಧಿ ನಿಲುವು ಹೊಂದಿದ್ದ ಟಿಎಂಸಿಗೆ ಮಣ್ಣು ಮುಕ್ಕಿಸಿದ್ದಾರೆ. ಅದೇ ತಮಿಳುನಾಡು ಡಿಎಂಕೆಗೆ ಅಲ್ಲಿನ ಹಿಂದು ಮತದಾರರು ಸ್ಪಷ್ಟ ಸಂದೇಶ ನೀಡಿದ್ದಾರೆ. ಇನ್ನು ಅಸ್ಸಾಂ, ಪುದುಚೇರಿ ಬಿಜೆಪಿಗೆ ಮತದಾರರು ಜಯ ಎಂದಿದ್ದಾರೆ. ಒಟ್ಟಾರೆ, ದೇಶದ ಜನರು ಹಿಂದುತ್ವದ ಪರವಾಗಿದ್ದಾರೆ ಎಂಬುದು ಸಾಬೀತಾಗಿದೆ ಎಂದರು.

# ಕ್ಷಣಿಕ ಸುಖಕ್ಕಾಗಿ ಸಂಬಂಧಗಳ ಬಲಿ



। ಪುಷ್ಪ ಪ್ರಸಾದ್



ಅನೈತಿಕ ಸಂಬಂಧ, ತತ್ಸಂಬಂಧಿತ ಅಪರಾಧ ಕೃತ್ಯಗಳನ್ನು ನಾವು ನೀವೆಲ್ಲರು ನಿತ್ಯ ನೋಡುತ್ತಲೇ ಇದ್ದೇವೆ. ಜೀವನದಲ್ಲಿ ಎಲ್ಲವೂ ಕ್ಷಣಿಕ. ವರ್ತಮಾನದ ಕ್ಷಣವು ಮುಂದಿನ ಕ್ಷಣದಲ್ಲಿ ಭೂತಕಾಲಕ್ಕೆ ಹೋಗುತ್ತದೆ ಮತ್ತು ಮುಂದಿನ ಕ್ಷಣವು ವರ್ತಮಾನದ ಕ್ಷಣವಾಗುತ್ತದೆ. ಹಾಗಾಗಿ, ಮೂಲತಃ, ಪ್ರತಿಯೊಂದು ದುಃಖವೂ ಪ್ರತಿಯೊಂದು ಸಂತೋಷದಂತೆಯೇ ಕ್ಷಣಿಕವಾಗಿರುತ್ತದೆ. ಆದರೆ, ನೀವು ನಿಮ್ಮ ದುಃಖ ಅಥವಾ ಸಂತೋಷವನ್ನು ಮರೆತುಬಿಡುತ್ತೀರಿ ಎಂದರ್ಥವಲ್ಲ. ಅದು ಯಾವಾಗಲೂ ನಿಮ್ಮ ಮನಸ್ಸಿನಲ್ಲಿ ಒಂದು ನೆನಪಾಗಿ ಉಳಿಯುತ್ತದೆ. ದು:ಖದ ಬಗ್ಗೆ ಯೋಚಿಸುವ ಅಥವಾ ಸಂತೋಷದ ಬಗ್ಗೆ ಆನಂದಿಸುವ ಆಯ್ಕೆಯನ್ನು ಮಾನವರಿಗೆ ನೀಡಲಾಗಿದೆ. ಇದು ನಮ್ಮ ನಿಮ್ಮ ಜೀವನ. ದುಃಖದಿಂದ ಬದುಕಬೇಕು ಅಥವಾ ಸಂತೋಷದಿಂದ ಬದುಕಬೇಕು. ಹೇಗೆ ಕತ್ತಲ ರಾತ್ರಿಯ ನಂತರ ಪ್ರಕಾಶಮಾನವಾದ ಬಿಸಿಲಿನ ಬೆಳಿಗ್ಗೆ ಬರುತ್ತದೋ, ಹಾಗೆಯೇ ಜೀವನದಲ್ಲಿ ಸಂತೋಷವು ದುಃಖವನ್ನು ಅನುಸರಿಸುತ್ತದೆ. ಸಂಬಂಧಗಳ ಮೌಲ್ಯ ಮರೆತ ಸಮಾಜಕ್ಕೆ ಇದೊಂದು ಎಚ್ಚರಿಕೆಯ ಗಂಟೆ. ಇಂದಿನ ದಿನಗಳಲ್ಲಿ ನಡೆಯುತ್ತಿರುವ ಕ್ರೌರ್ಯಗಳನ್ನು ನೋಡುತ್ತಿದ್ದರೆ, ಮಾನವೀಯ ಮೌಲ್ಯಗಳು ಎಷ್ಟು ಅಧಃಪತನಕ್ಕೆ ಇಳಿದಿವೆ ಎಂಬುದು ಅರ್ಥವಾಗುತ್ತದೆ. ಗಂಡ ಹೆಂಡತಿಗೆ ಮೋಸ ಮಾಡುವುದು, ಹೆಂಡತಿ ಗಂಡನಿಗೆ ಮೋಸ ಮಾಡುವ ಎಷ್ಟೋ ಪ್ರಕರಣಗಳು ದಿನನಿತ್ಯ ಕೇಳಿ ಬರುತ್ತದೆ. ಅನೈತಿಕ ಸಂಬಂಧದಿಂದಾಗಿ ಸುಂದರವಾಗಿ ನಡೆಯಬೇಕಾದ ಒಂದು ಸಂಸಾರ ಮುರಿದು ಬೀಳುತ್ತಿದೆ. ದಾಂಪತ್ಯ ಜೀವನದಲ್ಲಿ ಲೈಂಗಿಕ ತೃಪ್ತಿ ಮುಖ್ಯ. ಯಾವಾಗ ಲೈಂಗಿಕ ಅತೃಪ್ತಿ ಕಾಡುತ್ತದೆಯೋ ಅಂತಹ ಸಂದರ್ಭದಲ್ಲಿ ಆಕೆ/ಆತ ಅನೈತಿಕ ಸಂಬಂಧದಲ್ಲಿ ಬೀಳುವ ಸಾಧ್ಯತೆ ಹೆಚ್ಚು.

ಒಂದು ಕಾಲದಲ್ಲಿ ಪತ್ನಿ ಎಂದರೆ ಪತಿಯೊಂದಿಗೆ ಜೀವನಪರ್ಯಂತ ಜೊತೆಯಾಗಿರುವ ?ದೇವತೆ? ಎಂದು ತಿಳಿಯಲಾಗುತ್ತಿತ್ತು ಆದರೆ ಇಂದು ಕೇವಲ ಕ್ಷಣಿಕ ಸುಖಕ್ಕಾಗಿ, ಕೆಲವು ದಿನಗಳ ವ್ಯಾಮೋಹಕ್ಕಾಗಿ ದಶಕಗಳ ಕಾಲ ಜೊತೆಗಿದ್ದ ಪತಿ ಅಥವಾ ಪತ್ನಿಯನ್ನೇ ಕೊಲ್ಲಲು ಹಿಂಜರಿಯದ ಭೀಕರ ಪರಿಸ್ಥಿತಿಗಳು ಇಂದು ತಾಂಡವವಾಡುತ್ತಿವೆ. ಇದಕ್ಕೆಲ್ಲಾ ಕಾರಣ ಹುಡುಕಲು ಹೊರಟರೆ ಲೈಂಗಿಕ ಅತೃಪ್ತಿ ಎಂಬುದು ಮೇಲ್ನೋಟಕ್ಕೆ ಕಾಣುತ್ತದೆ. ಈಗ ಕೈಗೆ ಸ್ಮಾರ್ಟ್‌ಫೋನ್ ಬಂದಿದೆ, ದಿನದ 24 ಗಂಟೆಗಳ ಕಾಲ ಸೋಷಿಯಲ್ ಮೀಡಿಯಾಗಳ ಜೊತೆ ಕಳೆಯುವಂತಾಗಿದೆ. ಅಲ್ಲಿ ಮಾತನಾಡುತ್ತಾ, ಹರಟೆ ಹೊಡೆಯುತ್ತ ಅನೈತಿಕ ಸಂಬಂಧಗಳಿಗೆ ಬಾಗಿಲುಗಳು ತೆರೆದುಕೊಂಡವು. ಅಪರಿಚಿತ ವ್ಯಕ್ತಿಗಳೊಂದಿಗೆ ಚಾಟಿಂಗ್, ರಹಸ್ಯ ಸಂಬಂಧಗಳು, ಇವೇ ಕುಟುಂಬಗಳ ವಿನಾಶಕ್ಕೆ ಮೂಲ ಕಾರಣಗಳಾಗಿ ಎಡೆ ಎತ್ತಿವೆ. ಹೊರಗಿನವರು ನೀಡುವ ತಾತ್ಕಾಲಿಕ ಸಂತೋಷವನ್ನೇ ನಿಜವಾದ ಪ್ರೀತಿಯೆಂದು ಭ್ರಮಿಸಿ, ತನಗೆ ಆಸರೆಯಾಗಿದ್ದ ಪತಿಯನ್ನು/ ಪತ್ನಿಯನ್ನು ಶತ್ರುವಿನಂತೆ ನೋಡುವುದು ಎಷ್ಟು ಕ್ರೂರವೋ ಹೇಳಲು ಸಾಧ್ಯವಾಗುತ್ತಿಲ್ಲ. ಅಡ್ಡ ಬಂದವರನ್ನು ತೊಲಗಿಸಿದರೆ ಸ್ವತಂತ್ರವಾಗಿ ಬದುಕಬಹುದು ಎಂಬ ಹುಚ್ಚು ಆಲೋಚನೆಯಿಂದ ಅಪರಾಧಗಳಲ್ಲಿ ತೊಡಗುವುದು ಕೇವಲ ವೈಯಕ್ತಿಕ ಪತನವಲ್ಲ, ಬದಲಾಗಿ ಸಮಾಜಕ್ಕೆ ಅಪಾಯದ ಗಂಟೆ ಎಂದೇ ಹೇಳಬಹುದು. ಹೆತ್ತ ಮಕ್ಕಳ ಭವಿಷ್ಯ, ಕುಟುಂಬದ ಗೌರವ ಮತ್ತು ಮಾನವೀಯ ಮೌಲ್ಯಗಳನ್ನು ಬದಿಗೊತ್ತಿ, ಕೇವಲ ಶಾರೀರಿಕ ಸುಖಕ್ಕಾಗಿ ಜೀವಗಳನ್ನೇ ಬಲಿಕೊಡುವುದು ಅತ್ಯಂತ ದುರದೃಷ್ಟಕರ. ದುಶ್ಚಟಗಳು ಮನುಷ್ಯನಿಗೆ ತಾತ್ಕಾಲಿ ಸುಖ ನೀಡಿದರೂ, ನಂತರದಲ್ಲಿ ಅವನ ಅಮೂಲ್ಯವಾದ ಸಮಯ, ಆರೋಗ್ಯ, ಗೌರವವನ್ನು ಹಾಳು ಮಾಡುವುದರ ಜೊತೆಗೆ ಆರ್ಥಿಕ ನಷ್ಟಕ್ಕೂ ಕಾರಣವಾಗುತ್ತದೆ. ಕ್ಷಣಿಕ ಸುಖಕ್ಕಾಗಿ ಇಂದು ವ್ಯಸನಕ್ಕೆ ದಾಸರಾಗುವುದರೊಂದಿಗೆ, ದುಶ್ಚಟಗಳ ಚಕ್ರವ್ಯೂಹದಲ್ಲಿ ಸಿಲುಕಿದರೆ ಅದರಿಂದ ಹೊರಬರುವುದು ಕಷ್ಟಸಾಧ್ಯ. ಕ್ಷಣಿಕ ಸುಖಕ್ಕಾಗಿ ಶಾಶ್ವತ ಸಂಬಂಧಗಳನ್ನು ಕೊಲೆ ಮಾಡಿ ಆ ಶವವನ್ನು ಹೇಗೆಗೋ ಕೊಚ್ಚುವುದು, ಬಿಸಾಡುವುದು, ಎಷ್ಟು ನೀಚಮಟ್ಟಕ್ಕೆ ಇಳಿದಿದೆ ಎಂದರೆ ಹೇಳಲು ಆಗುತ್ತಿಲ್ಲ , ದಿನ ನಿತ್ಯ ಎಲ್ಲರೂ ನೋಡುವಂತಾಗಿದೆ.

ಕ್ಷಣಿಕ ದುಃಖಗಳು ಸಾಮಾನ್ಯವಾಗಿ ಭಯ, ಒತ್ತಡ, ಚಿಂತೆ ಮತ್ತು ಆತಂಕಗಳಿಂದ ಪ್ರಚೋದಿಸಲ್ಪಡುತ್ತವೆ. ದೇಹದ ನೋವು ಅಷ್ಟಾಗಿ ಇರುವುದಿಲ್ಲ, ಆದರೆ ಮನಸ್ಸಿನ ದುಃಖಕ್ಕೆ ಸಂಬಂಧಿಸಿದೆ, ಅಲ್ಲಿ ಮನಸ್ಸು ಒಂದು ಸಣ್ಣ ನಿರೀಕ್ಷೆಯನ್ನು ಹೊಂದಿದ್ದು ಅದು ಈಡೇರುವುದಿಲ್ಲ, ಅಥವಾ ಅಹಂಕಾರವು ದುಃಖಿತವಾಗುತ್ತದೆ – ಕೋಪವು ಕ್ಷಣಿಕವಾಗಿರುತ್ತದೆ ಮತ್ತು ಶೀಘ್ರದಲ್ಲೇ ಅದು ಹೋಗುತ್ತದೆ. ಮತ್ತೊಂದೆಡೆ, ಕ್ಷಣಿಕ ಸಂತೋಷವು ಸಣ್ಣ ಸಂತೋಷಗಳಿಂದ ಬರುತ್ತದೆ, ಉದಾಹರಣೆಗೆ, ನಾವು ಏನನ್ನಾದರೂ ತಿನ್ನುತ್ತೇವೆ, ನಾವು ಎಲ್ಲೋ ಹೋಗುತ್ತೇವೆ, ನಾವು ಯಾರನ್ನಾದರೂ ಭೇಟಿಯಾಗುತ್ತೇವೆ – ಅಂತಹ ಸಂತೋಷದ ಕ್ಷಣಗಳು ಕ್ಷಣಿಕ, ಮುಂದಿನ ಕ್ಷಣದಲ್ಲಿ ಮತ್ತೆ ದುಃಖ ಬರಬಹುದು ಅಥವಾ ಸಂತೋಷ ಬರಬಹುದು. ನಮ್ಮ ಗುರಿ ಶಾಶ್ವತ ಸಂತೋಷವನ್ನು ಹೊಂದುವುದು ಮತ್ತು ನಮ್ಮ ಗುರಿ ಎಲ್ಲಾ ದುಃಖಗಳಿಂದ ಮುಕ್ತರಾಗುವುದು ಮತ್ತು ಅದಕ್ಕಾಗಿ, ನಾವು ಅನ್ವೇಷಣೆಯಲ್ಲಿ ಹೋಗಿ ಸತ್ಯವನ್ನು ಅರಿತುಕೊಳ್ಳಬೇಕು. ಆಕರ್ಷಣೆಯ ಪ್ರೀತಿಗಳು ಕ್ಷಣಿಕ ಸುಖ ಪಡೆದು ಅರ್ಧದಲ್ಲಿ ಬಿಟ್ಟು ಸಂಬಂಧಗಳು ದೂರ ಆಗುತ್ತವೆ. ಆದರೆ ನಿಜವಾದ ಪ್ರೀತಿಗೆ ಕೊನೆಯಿಲ್ಲ ಅದೊಂದು ಪವಿತ್ರವಾದ ಅನುಭವ, ಅದು ಸ್ವಾರ್ಥವಿಲ್ಲದ ಕಾಳಜಿ, ನೋವಿನಲ್ಲು, ಸಂತೋಷದಲ್ಲು ಮೌನವಾಗಿ ಜೊತೆ ನಿಲ್ಲುವುದು. ಎಷ್ಟೇ ಭಿನ್ನಾಭಿಪ್ರಾಯಗಳು, ಬದಲಾವಣೆಗಳು ಉಂಟಾದರು ಪರಸ್ಪರ ಅರ್ಥಮಾಡಿಕೊಂಡು ಕೊನೆವರೆಗೂ ಉಳಿಯುತ್ತದೆ.

ಆದರೆ ಇಂದಿನ ದಿನಗಳಲ್ಲಿ ನಡೆಯುತ್ತಿರುವುದು ಕ್ಷಣಿಕ ಸುಖಕ್ಕಾಗಿ ಸಂಬಂಧಗಳ ಕೊಲೆ. ಇದಕ್ಕೆಲ್ಲ ಕಾರಣ ಅನೈತಿಕ ಸಂಬಂಧಗಳು. ಅನೈತಿಕ ಸಂಬಂಧಗಳಿಗೆ ಮುಖ್ಯವಾಗಿ ಭಾವನಾತ್ಮಕ ಬೆಂಬಲದ ಕೊರತೆ, ದೈಹಿಕ ಅತೃಪ್ತಿ, ಸಂಗಾತಿಯ ಉದಾಸೀನತೆ ಮತ್ತು ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆ ಕಾರಣಗಳಾಗಿವೆ. ದಾಂಪತ್ಯದಲ್ಲಿನ ಹೊಂದಾಣಿಕೆಯ ಕೊರತೆ, ಏಕತಾನತೆ, ಕೆಲಸದ ಸ್ಥಳದಲ್ಲಿ ಹೆಚ್ಚು ಸಮಯ ಕಳೆಯುವುದು ಮತ್ತು ನಂಬಿಕೆಯ ದ್ರೋಹವು ದಂಪತಿಗಳನ್ನು ಇಂತಹ ಸಂಬಂಧಗಳತ್ತ ತಳ್ಳುತ್ತದೆ. ಅನೇಕ ಮಂದಿಗೆ ತಮ್ಮ ಸಂಗಾತಿಯ ಮೇಲಿನ ಆಕರ್ಷಣೆ ಕಡಿಮೆಯಾಗಿ ಬೇರೆಯವರ ಮೇಲೆ ದೈಹಿಕ ಆಕರ್ಷಣೆಯನ್ನು ಹೆಚ್ಚಾಗಿಸುತ್ತಾರೆ. ತಮ್ಮ ವೈವಾಹಿಕ ಜೀವನದಲ್ಲಿ ಪತಿ ಅಥವಾ ಪತ್ನಿ ತಮ್ಮ ಬಗ್ಗೆ ಕಾಳಜಿ ವಹಿಸುವುದಿಲ್ಲ ಎಂದು ಒಬ್ಬರು ಭಾವಿಸಿದಾಗ, ಅದು ವಿವಾಹೇತರ ಸಂಬಂಧಗಳ ಕಡೆಗೆ ವಾಲುತ್ತಾರೆ. ನಿರ್ದಿಷ್ಟವಾಗಿ ಹೇಳುವುದಾದರೆ, ತಮ್ಮ ಸಂಗಾತಿಯಿಂದ ಮಾನಸಿಕವಾಗಿ ಬೆಂಬಲವನ್ನು ಪಡೆಯದವರು ಮತ್ತು ಸಂಗಾತಿಯು ವಿಶ್ವಾಸದ್ರೋಹಿ ಎಂದು ಭಾವಿಸುವವರು ವಿವಾಹೇತರ ಸಂಬಂಧಗಳನ್ನು ಹುಡುಕುತ್ತಾರೆ. ಕ್ಷಣಿಕ ಸುಖಕ್ಕಾಗಿ ಸಂಬಂಧಗಳ ಬಲಿ ಕೊಡದೆ, ಸಂಬಂಧಗಳಲ್ಲಿ ಬಿರುಕು ಮೂಡದಂತೆ ಕುಳಿತು ಮಾತನಾಡಿದರೆ ಒಳಿತು. ಯುವ ಜನರು ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಂಡು ಇಂತಹ ದುಶ್ಚಟಗಳಿಂದ ದೂರ ಉಳಿದುಕೊಂಡು ಸಮಾಜದ ಒಳಿತಿಗಾಗಿ ದುಡಿಯಬೇಕಾಗಿದೆ.

## ಮಕ್ಕಳಿಗಾಗಿ ಇತಿಹಾಸದ ವಿಸ್ಮಯ ಲೋಕ:

# 'ಅನ್ವೇಷಣ 2026'ರಲ್ಲಿ ಪರಂಪರೆಯ ಅನಾವರಣ!



**ಬೆಂಗಳೂರು :** ಪುಟಾಣಿಗಳ ಜ್ಞಾನದಾಹವನ್ನು ತಣಿಸಲು ಮತ್ತು ನಮ್ಮ ಭವ್ಯ ಇತಿಹಾಸದ ಬಗ್ಗೆ ಕುತೂಹಲ ಮೂಡಿಸಲು ಪರಮ್ ಹಿಸ್ಟರಿ ಸೆಂಟರ್ ಅದ್ಭುತ ಬೇಸಿಗೆ ಶಿಬಿರವನ್ನು ಆಯೋಜಿಸಿದೆ. ಯುವಕ ಸಂಘದ ಸಹಯೋಗದೊಂದಿಗೆ ನಡೆಯುತ್ತಿರುವ 'ಅನ್ವೇಷಣ 2026' ಎಂಬ ಈ ವಿಶಿಷ್ಟ ಕಾರ್ಯಕ್ರಮವು ಮೇ 11 ರಿಂದ ಮೇ 17 ರವರೆಗೆ ಜಯನಗರದ 4ನೇ ಬ್ಲಾಕ್‌ನಲ್ಲಿರುವ 'ಯುವಪಥ'ದಲ್ಲಿ ನಡೆಯಲಿದೆ.

ವಿಭಿನ್ನ ಮತ್ತು ಆಕರ್ಷಕ ಕಾರ್ಯಚಟುವಟಿಕೆ, ರೋಚಕ ಕಥೆಗಳು ಹಾಗೂ ನೈಜ ಅನುಭವದ ಮಾಧ್ಯಮಗಳ ಮೂಲಕ ಮಕ್ಕಳನ್ನು ನಮ್ಮ ಇತಿಹಾಸದ ಕಾಲಗರ್ಭಕ್ಕೆ ಕರೆದೊಯ್ಯುವುದು ಈ ಶಿಬಿರದ ಮುಖ್ಯ ಉದ್ದೇಶವಾಗಿದೆ. ಬರೀ ಪುಸ್ತಕದ ಪಾಠಗಳಿಗೆ ಸೀಮಿತವಾಗದೆ, ಇತಿಹಾಸವನ್ನು ಸ್ಪರ್ಶಿಸಿ, ಅನುಭವಿಸಿ ಕಲಿಯುವ ವಿನೂತನ ಮಾದರಿಯನ್ನು ಇಲ್ಲಿ ರೂಪಿಸಲಾಗಿದೆ.

**ಇತಿಹಾಸದೊಂದಿಗೆ ಮುಖಾಮುಖಿ: ಇಲ್ಲಿದೆ ಹತ್ತು ಹಲವು ವಿಶೇಷತೆ!**

ಈ ಬಾರಿ ಶಿಬಿರದಲ್ಲಿ ಇತಿಹಾಸದ ಗಂಭೀರ ವಿಷಯಗಳನ್ನು ಮಕ್ಕಳಿಗೆ ಮೋಜಿನ ರೂಪದಲ್ಲಿ ಹೇಳಿಕೊಡಲು ಈ ಕೆಳಗಿನ ಚಟುವಟಿಕೆಯನ್ನು ಹಮ್ಮಿಕೊಳ್ಳಲಾಗಿದೆ:

- **ಪಠ್ಯದ ಮಿತಿಯಾಚೆ ಇತಿಹಾಸ ಅರಿಯಲು ಮಕ್ಕಳಿಗೊಂದು ಸುವರ್ಣಾವಕಾಶ**
- **ಜಯನಗರದ ಯುವಪಥದಲ್ಲಿ ಮೇ 11ರಿಂದ ಬೇಸಿಗೆಯ ಸಂಭ್ರಮ**
- **ಮಕ್ಕಳಲ್ಲಿ ಸಾಂಸ್ಕೃತಿಕ ಪ್ರಜ್ಞೆ ಹಾಗೂ ಕುತೂಹಲ ಮೂಡಿಸುವ ಗುರಿ**
- **ಪ್ರಾಯೋಗಿಕ ಕಲಿಕೆಯ ಮೂಲಕ ಇತಿಹಾಸದ ದಂತಕಥೆಗಳ ಪರಿಚಯ**
- **6 ರಿಂದ 16 ವರ್ಷದ ಪುಟಾಣಿಗಳ ಜ್ಞಾನದಾಹಕ್ಕೆ ಇಲ್ಲಿದೆ ವೇದಿಕೆ**

- ಪುರಾತತ್ವ ಉತ್ಖನನ (Archaeology Simulation): ಭೂಮಿಯ ಅಡಿಯಲ್ಲಿ ಅಡಗಿರುವ ಇತಿಹಾಸವನ್ನು ಹೊರತೆಗೆಯುವ ನೈಜ ಅನುಭವ.
- ಪ್ರಾಚೀನ ಕಲೆ ಮತ್ತು ಕರಕುಶಲ: ಹಳೆಯ ಕಾಲದ ಆಭರಣಗಳ ತಯಾರಿಕೆ ಮತ್ತು ನೈಜವಾಗಿ ಮಣ್ಣಿನಲ್ಲಿ ಮಡಿಕೆ ಮಾಡುವ ಕಲೆ.
- **ಕಾಲಯಾನದ ಕಥೆಗಳು:** ನಮ್ಮ ನಾಡಿನ ವೀರರ ದಂತಕಥೆಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುವ ಕಥಾ ಸೆಷನ್‌ಗಳು.
- ಡಿಜಿಟಲ್ ಪರಿಶೋಧನೆ: ಆಧುನಿಕ ತಂತ್ರಜ್ಞಾನದ ಮೂಲಕ ಐತಿಹಾಸಿಕ ತಾಣಗಳ ವರ್ಚುವಲ್ ಭೇಟಿ.
- ಮೋಜಿನ ಆಟಗಳು: ಇತಿಹಾಸ ಪ್ರಜ್ಞೆ ಮೂಡಿಸುವ ಒಳಾಂಗಣ ಕ್ರೀಡೆಗಳು ಹಾಗೂ ಸೃಜನಶೀಲ ಕಲೆಗಳ ಬಗ್ಗೆ ಇಲ್ಲಿ ಕಲಿಯಬಹುದಾಗಿದೆ.

ಶಿಬಿರದ ಸಮಯ ಮತ್ತು ವಯೋಮಿತಿ

ಈ ಅನ್ವೇಷಣ ಶಿಬಿರವು ಪ್ರತಿದಿನ ಬೆಳಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 1:20ರವರೆಗೆ ನಡೆಯಲಿದ್ದು, 6 ರಿಂದ 16 ವರ್ಷ ವಯಸ್ಸಿನ ಮಕ್ಕಳು ಈ ಜ್ಞಾನಯಜ್ಞದಲ್ಲಿ ಪಾಲ್ಗೊಳ್ಳಬಹುದು. ಮಕ್ಕಳಿಗೆ ಅತ್ಯುತ್ತಮ ಸಾಂಸ್ಕೃತಿಕ ಬುನಾದಿ ಹಾಕಲು ಇದೊಂದು ಸುಸಮಯವಾಗಿದೆ.

**ಹೆಚ್ಚಿನ ವಿವರಕ್ಕಾಗಿ ಇಲ್ಲಿ ಸಂಪರ್ಕಿಸಿ**

"ಅನ್ವೇಷಣ 2026" – ಆಡುತ್ತಾ, ಕಲಿಯುತ್ತಾ ನಮ್ಮ ಇತಿಹಾಸದ ದಂತಕಥೆಗಳನ್ನು ಅನ್ವೇಷಿಸಿ!


ನಿಮ್ಮ ಮಕ್ಕಳ ಬೇಸಿಗೆಯ ರಜೆಯನ್ನು ಅರ್ಥಪೂರ್ಣವಾಗಿಸಲು ಇಂದೇ ಹೆಸರನ್ನು ನೋಂದಾಯಿಸಿ. ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ದೂರವಾಣಿ ಸಂಖ್ಯೆ ಅಥವಾ ಇಮೇಲ್ ವಿಳಾಸವನ್ನು ಸಂಪರ್ಕಿಸಿ:

- ದೂರವಾಣಿ ಸಂಖ್ಯೆ: 9035034728
- ಇಮೇಲ್: events@paramexp.org
- ಸ್ಥಳ: ಯುವಪಥ, ನಂ. 4, 31ನೇ ಕ್ರಾಸ್, 11ನೇ ಮೇನ್, 4ನೇ ಬ್ಲಾಕ್, ಜಯನಗರ, ಬೆಂಗಳೂರು.

# ಜೀವನದ ಪಾಠ ನೀಡುವ ಪುಸ್ತಕಗಳು




। ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.



ಪುಸ್ತಕಗಳು ಜ್ಞಾನದಿಂದ ತುಂಬಿವೆ. ಜೀವನದ ಪಾಠ ನೀಡುತ್ತವೆ. ಕಷ್ಟಗಳು,ಪ್ರೀತಿ,ಭಯ,ಜೀವನದ ಭಾಗವಾಗಿರುವ ಪ್ರತಿಯೊಂದು ಸಣ್ಣ ವಿಷಯದ ಬಗ್ಗೆಯೂ ನಮಗೆ ಕಲಿಸುತ್ತವೆ.ಪುಸ್ತಕ ಓದುವಿಕೆಯ ಪ್ರಾಮುಖ್ಯತೆಯು ನಮ್ಮ ಸ್ವ ಅಭಿವೃದ್ಧಿ,ಬೆಳವಣಿಗೆಯನ್ನು ಪೂರೈಸುವ ವಿಧಾನಗಳಲ್ಲಿ ಪ್ರತಿಫಲಿಸುತ್ತದೆ.

**ಪುಸ್ತಕದ ಪ್ರಾಮುಖ್ಯತೆ**

* ಪುಸ್ತಕ ನಮ್ಮ ಆತ್ಮೀಯ ಸ್ನೇಹಿತರು.
* ನಮ್ಮ ಕಲ್ಪನೆಯನ್ನು ಬೆಳಗಿಸುತ್ತವೆ.
* ನಮ್ಮ ಸುತ್ತಲಿನ ಪ್ರಪಂಚದ ನಮ್ಮ ಅನನ್ಯ ದೃಷ್ಟಿಕೋನ ರೂಪಿಸಲು ಸಹಾಯ ಮಾಡುತ್ತದೆ.
* ಆತ್ಮವಿಶ್ವಾಸವನ್ನು ಬೆಳಸುತ್ತದೆ.
* ಮಾನಸಿಕ ಭಾವನಾತ್ಮಕವಾಗಿ ಬೆಳೆಯಲು ಸಹಾಯ ಮಾಡುತ್ತದೆ.
* ಶಬ್ದಕೋಶವನ್ನು ಹೆಚ್ಚಿಸುತ್ತದೆ.
* ಹೊಸಭಾಷೆ ಕಲಿಯಲು ಸ್ಫೂರ್ತಿ ನೀಡುತ್ತದೆ.
* ವಿಶ್ಲೇಷಾತ್ಮಕ ಕೌಶಲವನ್ನು ಬೆಳೆಸುತ್ತದೆ.
* ಚಿಕಿತ್ಸಿಕ ಅದ್ಭುತ ಏಕಾಂತ ನೀಡುತ್ತದೆ.
* ಜೀವನದ ಪ್ರಮುಖ ಪಾತ್ರ ನೀಡುತ್ತದೆ.
* ಜಾಣ್ಮೆಯನ್ನು ಚುರುಕುಗೊಳಿಸುತ್ತದೆ.
* ವಿದ್ಯಾರ್ಥಿಗಳನ್ನು ಬುದ್ಧಿವಂತರನ್ನಾಗಿ ಮಾಡುತ್ತದೆ.
* ಜ್ಞಾಪಕ ಶಕ್ತಿಯನ್ನು ಹೆಚ್ಚಿಸುತ್ತದೆ.
* ವಿದ್ಯಾರ್ಥಿಗಳ ಒತ್ತಡ ನಿವಾರಿಸುತ್ತದೆ.
* ಬರವಣಿಗೆಯ ಕೌಶಲವನ್ನು ಸುಧಾರಿಸುತ್ತದೆ.
* ವಿಷಯಗಳ ದೃಷ್ಟಿಕೋನವನ್ನು ಪರಿಚಯಿಸುತ್ತದೆ.
* ಸ್ವಯಂ ಸುಧಾರಣೆಗೆ ಸಹಾಯ ಮಾಡುತ್ತವೆ.
* ಇತಿಹಾಸವನ್ನು ದಾಖಲಿಸುತ್ತದೆ.
* ಜಾಗೃತಿಯನ್ನು ಹರಡುತ್ತದೆ.
* ಓದುವದು ಉತ್ತಮ ಹವ್ಯಾಸ.




ಪುಸ್ತಕಗಳು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಮಾನಸಿಕವಾಗಿ ,ಭಾವನಾತ್ಮಕವಾಗಿ ಬೆಳೆಯಲು ಸಹಾಯ ಮಾಡುತ್ತವೆ. ಮನೆಯ ಹಿರಿಯರು ತಮ್ಮ ಆಯ್ಕೆಯ ಅಭಿರುಚಿಯ ಪುಸ್ತಕ ಕೊಳ್ಳುವದು ,ಓದುವದು ತಮ್ಮ ಓದಿನ ಅನುಭವ ಕುಟುಂಬ ಮತ್ತು ಸ್ನೇಹಿತರೊಂದಿಗೆ ಹಂಚಿಕೊಳ್ಳಬೇಕು.ಮಕ್ಕಳ ಆಸಕ್ತಿ ಗುರುತಿಸಿ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಪುಸ್ತಕ ಕೊಡಿಸಿ ಅವುಗಳನ್ನು ಓದುವಂತೆ ಪ್ರೋತ್ಸಾಹಿಸುವದು ಮುಖ್ಯವಾಗಿದೆ.ಪ್ರತಿದಿನವೂ ಪಠ್ಯೇತರ ಓದಿನ ಬಗ್ಗೆ ನಿಗಾವಹಿಸುವದು ಉತ್ತಮ.ಓದುವ ಅಭ್ಯಾಸವನ್ನು ಬೆಳೆಸಿಕೊಳ್ಳುವ ಅಥವಾ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವ ಮಕ್ಕಳು ಯಾವಾಗಲೂ ಶಾಲೆಯ ಎಲ್ಲ ಚಟುವಟಿಕೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಾರೆ.ವಿಶಾಲವಾದ ಶಬ್ದಕೋಶ ಹೊಂದಿರುವ ಹೆಚ್ಚುವರಿ ಪ್ರಯೋಜನವನ್ನು ಹೊಂದಿರುತ್ತಾರೆ.ಪುಸ್ತಕ ಉತ್ತಮ ಭಾಷಣಕಾರರಾಗಲು ಬರವಣಿಗೆಯ ಕೌಶಲ ಹೆಚ್ಚಿಸಲು ಸಹಾಯ ಮಾಡುತ್ತದೆ.ಓದುವಿಕೆಯು ನಮ್ಮ ಮೆದುಳಿನ ಸ್ನಾಯುಗಳಿಗೆ ಉತ್ತಮ ವ್ಯಾಯಾಮ ನೀಡುವ ಮೂಲಕ ನಮಗೆ ಸಹಾಯ ಮಾಡುತ್ತವೆ.ಆಲಸ್ಯತನದ ಸಾಧ್ಯತೆಯನ್ನು ತಡೆಯುತ್ತವೆ.ಪುಸ್ತಕಗಳು ನಮ್ಮ ಉತ್ತಮ ಸ್ನೇಹಿತರು ಮತ್ತು ನಮ್ಮ ಶಿಕ್ಷಕರಾಗಬಹುದು.

# ಕುಗ್ಗದೆ ಮೌನಿಯಾಗಿರು ಮೆಚ್ಚಿಸಿ ಬದುಕದಿರು



। ವೀಣಾ ಪ್ರಭಾಕರ್ ಕಡೆಕಾರ್



ಪ್ರತಿ ಮನುಷ್ಯ ಜೀವಿಯ ಪ್ರತಿ ದಿನದ ಹೋರಾಟ ತನ್ನ ಜೀವಿಸುವಿಕೆಗಾಗಿ.. ತನ್ನವರ ಜೀವನಕ್ಕಾಗಿ?. ಬದುಕಿನ ಈ ಹೋರಾಟದಲ್ಲಿ ಅರಿವಿದ್ದು ಅರಿವಿಲ್ಲದೆ ಅನೇಕ ಸಲ ಪರಿಚಯಸ್ಥರು ಅಪರಿಚಿತರಿಂದ ಒಮ್ಮೆ ಹೊಗಳುವಿಕೆಗೆ ಒಳಗಾದರೆ ಇನ್ನೊಮ್ಮೆ ತೆಗಳುವಿಕೆ ಅಥವ ಅವಮಾನಕ್ಕೆ ಒಳಗಾಗುತ್ತೇವೆ.. ಸೂಕ್ಮ ವ್ಯಕ್ತಿತ್ವ ಹೊಂದಿದವರಾದರೆ ಅವಮಾನ ಅಥವಾ ತೆಗಳುವಿಕೆ ಅಪಹಾಸ್ಯ,ನಿಂದನೆಗಳು ಮಾನಸಿಕವಾಗಿ ಕುಗ್ಗಿಸಿ ಬದುಕನ್ನೇ ಇಲ್ಲವಾಗಿಸಬಹುದು ಇನ್ನು ಕೆಲವೊಮ್ಮೆ ಅದೇ ಸೂಕ್ಮ ಮನಸ್ಸು ತಪ್ಪಿಲ್ಲದೆಯು ಅರಿವಿಲ್ಲದೆ ಅವಮಾನಕ್ಕೆ ನಿರಂತರವಾಗಿ ಒಳಗಾದಾಗ ಕಲ್ಲಾಗಿ ಹೋಗಬಹುದು ಆ ಕಲ್ಲಿನ ಮನಸ್ಸೇ ಮುಂದೆ ಸಾಧನೆಗೆ ಸಾಕ್ಷಿಯಾಗಬಹುದು ಇಲ್ಲಿ ಮನಸ್ಸನ್ನು ಕುಗ್ಗಿಸಿಕೊಂಡ ವ್ಯಕ್ತಿ ಜೀವನದಲ್ಲಿ ಸೋಲನ್ನು ಉಂಡರೆ ಕಲ್ಲಿನಂತಾದ ವ್ಯಕ್ತಿ ಜೀವನದ ಗೆಲುವು ಆನಂದಿಸುವ ವ್ಯಕ್ತಿಯಾಗಿ ಸಮಾಜಕ್ಕೆ ಮಾದರಿಯಾಗಬಹುದು. ಹಾಗೆಯೇ ಕುಟುಂಬದಲ್ಲಿಯಾಗಲಿ ವೃತ್ತಿಜೀವನದಲ್ಲಾಗಲಿ ಎಲ್ಲರಲ್ಲಿಯೂ ಒಳ್ಳೆಯವರೆಂದು ಕರೆಸಿಕೊಳ್ಳಲು ಸಾಧ್ಯವಿಲ್ಲ .. ಇಂದು ಒಳ್ಳೆಯವರೆಂದು ಹೊಗಳಿದ ವ್ಯಕ್ತಿ ಮುಂದೊಂದು ದಿನ ತೆಗಳಿ ನಿಂದಿಸಬಹುದು ಅದೇ ಕೆಟ್ಟವರೆಂದು ಕರೆದ ವ್ಯಕ್ತಿ ಮುಂದೊಂದು ದಿನ ಒಳ್ಳೆಯವರೆಂದು ಹೊಗಳಿ ಅಟ್ಟಕ್ಕೇರಿಸಬಹುದು

ನಮ್ಮಿಂದ ಲಾಭವಾದರೆ ಒಳ್ಳೆಯವರಾಗುತ್ತೇವೆ ಲಾಭವಿಲ್ಲದೆ ಹೋದರೆ ಕೆಟ್ಟವರಾಗುತ್ತೇವೆ , ಅಷ್ಟೇ ಏಕೆ ಉತ್ತರ ಕೊಟ್ಟರೆ ಜೋರು ಎನ್ನುವ ನಾಮಧೇಯ ತಲೆಬಗ್ಗಿಸಿ ಸುಮ್ಮನಾದರೆ ಪಾಪದವರು ಎನ್ನುವ ಪಶು ನಾಮ, ಎಲ್ಲರನ್ನು ಮೆಚ್ಚಿಸಲು ಮೆಚ್ಚಿಸಿ ಜೀವನ ಮಾಡಲು ಸಾಧ್ಯವಿಲ್ಲ .ಹಾಗಾಗಿ ಯಾವುದೇ ಕ್ಷೇತ್ರವಿರಲಿ, ಪರಿಸರವಿರಲಿ ಹೊಗಳಿಕೆಗೆ ಹಿಗ್ಗಬಾರದು ತೆಗಳಿಕೆಗೆ ಕುಗ್ಗಬಾರದು ನೀವು ಕುಗ್ಗಿದಷ್ಟು ಕುಗ್ಗಿಸುವವರು ಇರುತ್ತಾರೆ ನಿಮ್ಮ ವೀಕ್ನೆಸ್ ಅವರ ದರ್ಪ ಮತ್ತು ಅಹಂಕಾರವಾಗುತ್ತದೆ? ಸಾಧಿಸಲು ಹೊರಟ ವ್ಯಕ್ತಿಗೆ ಅಡ್ಡ ಕಾಲುಹಾಕಿ ಕೆಡವಲು ನೂರಾರು ಮಂದಿ ನಮ್ಮ ಸುತ್ತಮುತ್ತಲೇ ಇರುತ್ತಾರೆ .. ತನಗಿಂತ ಮೇಲೆ ಯಾರು ಏರಬಾರದು ಎನ್ನುವ ಪರಿ ಒಂದೆಡೆಯಾದರೆ ನನಗಿಂತ ಮೇಲೆ ಯಾರು ಬರಬಾರದು ನಾನೇ ಸರ್ವಾಧಿಕಾರಿ ಎನ್ನುವ ಧೋರಣೆ ಹಾಗೂ ಆ ಕಾರಣಕ್ಕಾಗಿಯೇ ಅಡ್ಡ ಕಾಲು ಹಾಕುವ ನಿಸ್ಸೀಮರು ಇರುತ್ತಾರೆ ಇದರ ಇನ್ನೊಂದು ಮಜಲಾಗಿ ಅವಮಾನಿಸುವ ನಿಂದಿಸುವ ಹೆದರಿಸುವ ಪ್ರವೃತ್ತಿ ಅವರಿಂದ ಎದುರಾಗುತ್ತದೆ ಇವುಗಳನ್ನು ಮೆಟ್ಟಿನಿಂತು ದೃಷ್ಟಿಯನ್ನು ಕೇವಲ ಗುರಿಯತ್ತ ನೆಟ್ಟಾಗಲೆ ಪ್ರತಿಯೊಬ್ಬರ ಜೀವನದ ಸಾರ್ಥಕ್ಯತೆ ಈಡೇರುತ್ತದೆ ಯು.. ಎದುರಾಗುವ ಅವಮಾನ ಬರುವ ದೂರುಗಳನ್ನು ನಿಂದಕರನ್ನು ನಿರ್ಲಕ್ಷಿಸಿ ಪಕ್ಕಕ್ಕಿಟ್ಟು ಅದನ್ನೇ ಸವಾಲಾಗಿ ಸ್ವೀಕರಿಸಿ ನಿಂದಿಸುವ ಹಂಗಿಸುವವರ ಎದುರು ಮೌನವಾಗಿ ನಮ್ಮಲ್ಲಿರುವ ಪ್ರತಿಭೆ ಅಥವಾ ಶಕ್ತಿ ಯುಕ್ತಿಯನ್ನು ಉಪಯೋಗಿಸಿಕೊಂಡು ನಮ್ಮದೇ ಆದ ಹೊಸ ಲೋಕವನ್ನು ನಮಗಾಗಿ ನಮ್ಮವರಿಗಾಗಿ ಸುಂದರಗೊಳಿಸಿಕೊಂಡರೆ ಅದಕ್ಕಿಂತ ನೆಮ್ಮದಿ ಆತ್ಮತೃಪ್ತಿ ಇನ್ನೇನಿದೆ ಅಲ್ಲವೆ ..

# " ರಿಜೆಕ್ಷನ್ ಟು ರೆವಲ್ಯೂಷನ್ "



। ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 13

ಯಶಸ್ಸು ಎಂಬುದು ಕೇವಲ ಅದೃಷ್ಟವಲ್ಲ,ಅದು ಅಪಮಾನಗಳನ್ನು ಸಹಿಸಿ ಮೌನವಾಗಿ ಕಟ್ಟುವ ಸಾಮ್ರಾಜ್ಯ ಎಂಬ ಸತ್ಯಕ್ಕೆ ನಟ ವಿಜಯ್ ಅವರ ಜೀವನವೇ ಸಾಕ್ಷಿ.ಇಂದು ಕೋಟ್ಯಂತರ ಜನರನ್ನು ಸೆಳೆಯುವ ಅವರ ಪ್ರತಿಯೊಂದು ನಡೆಯೂ ಇಂದಿನ ಯುವ ಪೀಳಿಗೆಗೆ ಒಂದು ಸ್ಫೂರ್ತಿಯ ಪಾಠ.


ವಿಜಯ್ ಚಿತ್ರರಂಗಕ್ಕೆ ಕಾಲಿಟ್ಟಾಗ ಅವರಿಗೆ ಸಿಕ್ಕಿದ್ದು ಕೆಂಪು ಹಾಸಿನ ಸ್ವಾಗತವಲ್ಲ,ಬದಲಿಗೆ ಕಟುವಾದ ಟೀಕೆಗಳು. ಅವರ ರೂಪದ ಬಗ್ಗೆ ಹೀಯಾಳಿಸಿದವರೇ ಹೆಚ್ಚು.ಆದರೆ ಅವರು ಧೃತಿಗೆಡಲಿಲ್ಲ.ಜಗತ್ತು ನಿಮ್ಮನ್ನು ತಿರಸ್ಕರಿಸಿದಾಗ ಕುಗ್ಗುವ ಬದಲಿಗೆ,ಆ ಟೀಕೆಗಳನ್ನೇ ಇಂಧನವಾಗಿಸಿಕೊಂಡು ನಿಮ್ಮನ್ನು ನೀವು ಹೇಗೆ ರೂಪಿಸಿಕೊಳ್ಳಬೇಕು ಎಂಬುದನ್ನು ವಿಜಯ್ ತೋರಿಸಿಕೊಟ್ಟಿದ್ದಾರೆ.

ಸಿನಿಮಾ ಜೀವನದಲ್ಲಿ ಸಾಲು ಸಾಲು ಸೋಲುಗಳು ಎದುರಾದಾಗ ವಿಜಯ್ ಸೋಲೊಪ್ಪಿಕೊಳ್ಳಲಿಲ್ಲ. ಬದಲಾಗಿ,ಕಾಲಕ್ಕೆ ತಕ್ಕಂತೆ ತಮ್ಮನ್ನು ತಾವು ಅಪ್‌ಡೇಟ್ ಮಾಡಿಕೊಂಡರು. ನೃತ್ಯ,ನಟನೆ ಮತ್ತು ಶಿಸ್ತಿನ ಮೂಲಕ ತಮ್ಮದೇ ಆದ ಬ್ರ್ಯಾಂಡ್ ಸೃಷ್ಟಿಸಿದರು.ನಿಮ್ಮ ಮೌನ ಶತ್ರುಗಳನ್ನು ಕಾಡಲಿ,ನಿಮ್ಮ ಗೆಲುವು ಅವರಿಗೆ ಉತ್ತರಿಸಲಾಗದ ಪ್ರಶ್ನೆಯಾಗಲಿ ಎಂಬ ತತ್ವ ಅವರ ಯಶಸ್ಸಿನ ಗುಟ್ಟು.

ಬೆಳ್ಳಿತೆರೆಯ ನಾಯಕನಾಗಿ ಉಳಿಯದೆ,ಜನರ ನೋವಿಗೆ ಸ್ಪಂದಿಸಲು ರಾಜಕೀಯ ಅಖಾಡಕ್ಕೆ ಇಳಿದಿರುವುದು ಅವರ ಜೀವನದ ದೊಡ್ಡ ಕ್ರಾಂತಿ.ತಮಿಳಗ ವೆಟ್ರಿ ಕಳಗಂ ಮೂಲಕ ಅವರು ಹೊಸ ಸಂಚಲನ ಮೂಡಿಸಿದ್ದಾರೆ. ಕೇವಲ ಅಧಿಕಾರಕ್ಕಾಗಿ ಅಲ್ಲದೆ, ಬದಲಾವಣೆಗಾಗಿ ಅಖಾಡಕ್ಕೆ ಇಳಿಯುವ ಅವರ ಧೈರ್ಯ ಯುವಜನತೆಗೆ ನಾಯಕತ್ವದ ಗುಣಗಳನ್ನು ಕಲಿಸುತ್ತದೆ.

ಎಷ್ಟೇ ದೊಡ್ಡ ಸ್ಟಾರ್ ಆದರೂ ವಿಜಯ್ ಅವರ ಸರಳತೆ ಮಾದರಿ. ಅತಿಯಾದ ಪ್ರಚಾರಕ್ಕಿಂತ ಗುಣಮಟ್ಟದ ಕೆಲಸಕ್ಕೆ ಒತ್ತು ನೀಡುವುದು ಅವರ ಶೈಲಿ. ಮೌನವಾಗಿ ಶ್ರಮವಹಿಸಿದರೆ ಜಗತ್ತೇ ನಿಮ್ಮತ್ತ ತಿರುಗಿ ನೋಡುತ್ತದೆ ಎಂಬುದಕ್ಕೆ ಅವರೇ ಉದಾಹರಣೆ.

ನಿಮ್ಮ ಮೇಲೆ ಎಸೆಯಲ್ಪಟ್ಟ ಪ್ರತಿಯೊಂದು ಕಲ್ಲನ್ನು ನಿಮ್ಮ ಯಶಸ್ಸಿನ ಕೋಟೆಯ ಇಟ್ಟಿಗೆಯನ್ನಾಗಿ ಮಾಡಿಕೊಳ್ಳಿ. ನೆನಪಿಡಿ,



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,